ಸಿರಿಗನ್ನಡಂ ಗೆಲ್ಗೆ

# ರಾಜ್ಯಮಟ್ಟದ
# ದ್ವಿತೀಯ ಮಕ್ಕಳ ಸಾಹಿತ್ಯ ಸಮ್ಮೇಳನ

ಧಾರವಾಡ

## ಅಕ್ಟೋಬರ್ ೨೬-೨೭, ೧೯೮೫

## ಅಧ್ಯಕ್ಷ ಭಾಷಣ

ಅಧ್ಯಕ್ಷರು

**ಡಾ|| ಸಿದ್ಧಯ್ಯ ಪುರಾಣಿಕ**

**ಕರ್ನಾಟಕ ಮಕ್ಕಳ ಸಾಹಿತ್ಯ ಅಕಾಡೆಮಿ**

ಮತ್ತು

**ಸಮ್ಮೇಳನದ ಸ್ವಾಗತ ಸಮಿತಿ, ಧಾರವಾಡ**

# ಸಿರಿಗನ್ನಡಂ ಗೆಲ್ಗೆ

ಈ ಸಮ್ಮೇಳನದ ಉದ್ಘಾಟಕರಾದ ಮಾನ್ಯಶ್ರೀ ರಾಮಕೃಷ್ಣ ಹೆಗ್ಗಡೆ ಅವರೆ, ಪೋಷಕರಾದ ಸರ್ವಶ್ರೀ ಎಸ್. ಆರ್. ಬೊಮ್ಮಾಯಿ, ಬಿ.ಜಿ. ಬಣಕಾರ, ಬಿ.ಆರ್ ಯಾವಗಲ್ ಅವರೆ, ಮಾನ್ಯ ಡಾ|| ಜೀವರಾಜ ಆಳ್ವ ಅವರೇ, ಮಾನ್ಯ ಗೋವಿಂದೇ ಗೌಡರೆ, ಪೂಜ್ಯ ಮಹಾಪೌರರೇ, ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಪೂಜ್ಯ ವೀರೇಂದ್ರ ಹೆಗ್ಗಡೆ ಅವರೆ, ಸ್ವಾಗತಾಧ್ಯಕ್ಷರಾದ ಶ್ರೀ ಚಂದ್ರಕಾಂತ ಬೆಲ್ಲದ ಅವರೆ, ಮಕ್ಕಳ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಶ್ರೀ 'ಸಿಸು' ಸಂಗಮೇಶ ಅವರೆ, ಸ್ವಾಗತ ಸಮಿತಿಯ ಸರ್ವ ಸದಸ್ಯರೆ, ವಿವಿಧ ಗೋಷ್ಠಿಗಳ ಅಧ್ಯಕ್ಷ-ಉದ್ಘಾಟಕರೆ, ಮಮತೆಯ ಮಕ್ಕಳೆ, ಕನ್ನಡ ಸೋದರ ಸೋದರಿಯರೆ,

ಈ ರಾಜ್ಯಮಟ್ಟದ ದ್ವಿತೀಯ ಮಕ್ಕಳ ಸಾಹಿತ್ಯ ಸಮ್ಮೇಳನಕ್ಕೆ ನಾನು ಅಧ್ಯಕ್ಷನಾಗಿ ಆಯ್ಕೆಯಾದುದು ನಿಮ್ಮೆಲ್ಲರ ನಿರ್ವ್ಯಾಜ ಅಭಿಮಾನ, ಆತ್ಮೀಯತೆ, ಅಕ್ಕರತೆಗಳ ಫಲವಾಗಿ, ಪ್ರಸಾದವಾಗಿ. ಈ ಪ್ರಸಾದವನ್ನು ನತಮಸ್ತಕನಾಗಿ, ನಮ್ರತೆಯೊಡನೆ ಸ್ವೀಕರಿಸಿ, ಅದನ್ನಿತ್ತ ತಮಗೆ ತಲೆಬಾಗುತ್ತೇನೆ. ಆಧುನಿಕ ಕನ್ನಡ ಸಾಹಿತ್ಯದ ದಿಗ್ದಂತಿಗಳಲ್ಲಿ ಒಬ್ಬರಾದ ಡಾ|| ಶಿವರಾಮ ಕಾರಂತರು ಅಲಂಕರಿಸಿದ್ದ ಈ ಪೀಠವನ್ನು ಅಧೀರತೆಯೊಡನೆಯೇ ಏರುತ್ತಲಿದ್ದೇನೆ-ಮಕ್ಕಳ ಸಾಹಿತ್ಯ ಸೃಷ್ಟಾರನೆಂಬ ಅರ್ಹತೆಯಿಂದಲ್ಲ, ಮಕ್ಕಳ ಸಾಹಿತ್ಯ ಪ್ರೇಮಿಯೆಂಬ ನಿಮಿತ್ತದಿಂದ ; ನಾನೀ ಮಹತ್ತರವಾದ ಮಣಿಹವನ್ನು ನಿರ್ವಹಿಸುವಲ್ಲಿ ತತ್ತರಿಸಿದರೆ ಎತ್ತಿ ಹಿಡಿಯಲು ತಾವಿರುವಿರಿ ಎಂಬ ವಿಶ್ವಾಸದಿಂದ.

ಈ ದೇಶದ ಭವಿಷ್ಯವನ್ನು ಪಂಚಾಂಗಗಳಲ್ಲಿ ಅಲ್ಲ, ಈ ದೇಶದ ಮಕ್ಕಳ ನಯನ ದೀಧಿತಿಯಲ್ಲಿ ನೋಡಿರೆಂದು ಹೇಳಿ ಹೋದರು 'ಚಾಚಾ ನೆಹರು'. ಆದರೂ ಇಂದಿಗೂ ಈ ದೇಶದ ಮಕ್ಕಳಿಗೆ, ಅದರಲ್ಲೂ ದುರ್ಬಲ ವರ್ಗದವರ ಮಕ್ಕಳಿಗೆ ನೀಡಬೇಕಾದಷ್ಟು ಗಮನವನ್ನು ನಾವು ನೀಡಿಲ್ಲ; ಅವರ ಅನಿರ್ಬಂಧಿತವಾದ ವಿಕಾಸಕ್ಕೆ ತಕ್ಕ ಏರ್ಪಾಟುಗಳನ್ನು ಮಾಡಿಲ್ಲ ; ಅವರ ಆಹಾರ, ಅರಿವು, ಅರಿವೆ, ಆರೋಗ್ಯಗಳ ಪ್ರಶ್ನೆ ಸಮಸ್ಯೆಗಳು ನಮ್ಮನ್ನು ಅಷ್ಟೊಂದು ಕಾಡಿಲ್ಲ. ಇಲ್ಲಿ ಹುಟ್ಟುವ ಪ್ರತಿ ಸಹಸ್ರ ಶಿಶುಗಳಲ್ಲಿ ೧೨೧ ಕೂಸುಗಳು ಕೂಸುಗಳಾಗಿಯೇ ಸಾಯುತ್ತಿವೆ, ಇನ್ನೂ ! ಬಾಲರೋಗಗಳಿಗೆ ತುತ್ತಾಗುವ ಬಾಲಕ ಬಾಲಕಿಯರೆಷ್ಟೋ ; ಆಹಾರದ ಕೊರತೆಯಿಂದ ಅಂಧರಾಗುವ, ಅಂಗವಿಕಲರಾಗುವ ಮಕ್ಕಳೆಷ್ಟೋ ; ಅನಾಥರಾಗಿ, ಅನಕ್ಷರಸ್ಥರಾಗಿ, ಬಾಲ ಕಾರ್ಮಿಕರಾಗಿ, ಬಾಲಭಿಕ್ಷುಕರಾಗಿ, ಬಾಲಾಪರಾಧಿಗಳಾಗಿ, ಜೀತದಾಳುಗಳಾಗಿ, ಇನ್ನೂ ಏನೇನೋ ಆಗಿ ಹೃದಯವಿದ್ರಾವಕವಾದ ಹುಲುಬಾಳನ್ನು ಹೊರೆವ

ಮಕ್ಕಳೆಷ್ಟೋ! ಪ್ರಾಥಮಿಕ ಶಿಕ್ಷಣಕ್ಕೇ ಪ್ರಾಥಮಿಕತೆಯಿಲ್ಲದ ಪಾಂಚವಾರ್ಷಿಕ ಯೋಜನೆಗಳು, ವರ್ತಮಾನವು ಭವಿಷ್ಯದತ್ತ ಬಿಟ್ಟ ಬಾಣಗಳೆಂದನಿಸಿದ ಮಕ್ಕಳ ಬರಿಹೊಟ್ಟೆ, ಬರಿಮೈಗಳ, ಕಲಿಕೆ ಗಳಿಕೆಗಳ ಸಮಸ್ಯೆಗಳನ್ನು ಇಂದಿಗೂ ಪರಿಹರಿಸದ ಸರಕಾರಗಳು, ಹಾಲಿನ ಮಾತು ಹಾಗಿರಲಿ, ಗಂಜಿಗೂ ಗತಿಯಿಲ್ಲದ ತಮ್ಮ ಮಕ್ಕಳನ್ನು ತಬ್ಬಿಕೊಂಡು ಗೋಗರೆವ ಬಡ ತಾಯಂದಿರು – ಎಷ್ಟು ದಾರುಣವಾದುದು ಈ ಚಿತ್ರ !

ಅಕ್ಷರಾಭ್ಯಾಸವೇ ಅನೇಕ ಬಡಮಕ್ಕಳಿಗೆ ಗಗನಕುಸುಮ ಪರಿಮಳವಾಗಿರುವಾಗ ಮಕ್ಕಳ ಸಾಹಿತ್ಯದ ಬಗ್ಗೆ ಮಾತನಾಡುವುದು ಹಾಸ್ಯಾಸ್ಪದವಾದುದೆಂದು ಹಲವರಿಗೆ ತೋರಬಹುದು. ನೂರಕ್ಕೆ ಎಪ್ಪತ್ತರಂತಿರುವ ನಿರಕ್ಷರಸ್ಥರ ಶಿಕ್ಷಣಕ್ಕೆ ಆದ್ಯತೆಯಿರಬೇಕು. ಸರಿಯೇ. ನಿರುದ್ಯೋಗ ನಿವಾರಣೆಗೆ ಆದ್ಯತೆಯಿರಬೇಕು. ಸರಿಯೆ. ಗರ್ಭಿಣೀ ಸ್ತ್ರೀಯರ ಸಮಸ್ಯೆಗಳಿಗೆ ಆದ್ಯತೆಯಿರಬೇಕು. ಸರಿಯೆ. ರೋಗಿಗಳ ಚಿಕಿತ್ಸೆಗೆ ಆದ್ಯತೆಯಿರಬೇಕು. ಸರಿಯೆ. ಆದರೆ ಒಂದು ವಿಷಯವನ್ನಿಲ್ಲಿ ನೆನೆಯಬೇಕು : ಭಾರತ ಬಿಡುಗಡೆ ಪಡೆದ ದಿನದಿಂದಲೇ ಆಗ ಇದ್ದ ಮಕ್ಕಳ ಬೆಳವಣಿಗೆಗೆ, ಸರ್ವತೋಮುಖವಾದ ವಿಕಾಸಕ್ಕೆ ಆದ್ಯತೆ ದೊರೆತಿದ್ದರೆ ಇಂದು ಗೃಹಸ್ಥರಾಗಿರುವ ಅವರು ಇವೆಲ್ಲ ಸಮಸ್ಯೆಗಳನ್ನೂ ಈ ಪ್ರಮಾಣದಲ್ಲಿ ಎದುರಿಸುತ್ತಿರಲಿಲ್ಲ. ಆದದ್ದು ಆಗಿ ಹೋಯಿತು, ಈಗ ಮಕ್ಕಳಾಗಿರುವವರನ್ನಾದರೂ ನಾವು ನಿರ್ಲಕ್ಷಿಸದಿರೋಣ ; ಅವರು ಹಸಿವೆ, ನಗ್ನತೆ, ಕೂಲಿ, ಭಿಕ್ಷೆ. ಜೀತ, ರೋಗ ರುಜಿನಗಳಿಂದ ಮುಕ್ತರಾಗಿ, ಸರಿಯಾದ ಶಾಲೆಗಳನ್ನು ಸೇರಿ, ಪಠ್ಯಪುಸ್ತಕಗಳಿಗೆ ಪೂರಕವಾಗಿ ಮಕ್ಕಳ ಸಾಹಿತ್ಯವನ್ನೂ ಪಡೆದು ಪೂರ್ಣ ವಿಕಸಿತರಾಗುವಂತೆ ಪ್ರಯತ್ನಿಸೋಣ.

ಈ ಹಿನ್ನೆಲೆಯಲ್ಲಿ ನೋಡಿದಾಗ ಗೆಳೆಯರಾದ 'ಸಿಸು' ಸಂಗಮೇಶ ಅವರೂ, ಅವರ ಸಂಗಡಿಗರೂ ಕೂಡಿ ಕಟ್ಟಿದ 'ಕರ್ನಾಟಕ ಮಕ್ಕಳ ಸಾಹಿತ್ಯ ಅಕಾಡೆಮಿ'ಯು ಸ್ವಾಗತಾರ್ಹ ಸಾಹಸವಾಗಿದೆ. ಇದರ ಪ್ರಯತ್ನಗಳ ಫಲವಾಗಿ ಇದಾಗಲೇ ಕಲಬುರಗಿಯಲ್ಲಿ ರಾಜ್ಯಮಟ್ಟದ ಪ್ರಥಮ ಮಕ್ಕಳ ಸಾಹಿತ್ಯ ಸಮ್ಮೇಳನವು ಜರುಗಿದುದೂ, ಈಗ ಇಲ್ಲಿ ದ್ವಿತೀಯ ಸಮ್ಮೇಳನ ನಡೆಯುತ್ತಲಿರುವುದೂ ಪ್ರಶಂಸನೀಯವಾದುದು. ಈ ಸಮ್ಮೇಳನವನ್ನು ಸಂಘಟಿಸುವಲ್ಲಿ ಸ್ವಾಗತ ಸಮಿತಿಯ ಪದಾಧಿಕಾರಿಗಳಲ್ಲದೆ ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಯ ವ್ಯಾಪ್ತಿಯಲ್ಲಿ ಬರುವ ಅನೇಕ ಸಂಘ ಸಂಸ್ಥೆಗಳೂ, ವಿಖ್ಯಾತ ವಿದ್ವಾಂಸರೂ, ಹಿರಿಯ ಸಾಹಿತಿಗಳೂ, ವರ್ತಕರೂ, ಉದ್ಯಮಪತಿಗಳೂ, ಕಲಾವಿದರೂ, ಕುಶಲಕರ್ಮಿಗಳೂ, ಸಾರ್ವಜನಿಕ ಧುರೀಣರೂ, ವಿದ್ಯಾರ್ಥಿಗಳೂ, ಪತ್ರಿಕಾಪ್ರತಿನಿಧಿಗಳೂ ಸಕ್ರಿಯ ಸಹಕಾರವನ್ನು ನೀಡಿರುವುದೂ, ಸಮ್ಮೇಳನದ ಅಂಗವಾಗಿ ವಿಶೇಷಜ್ಞರ ಅಧ್ಯಕ್ಷತೆಯಲ್ಲಿ ಐದು ಗೋಷ್ಠಿಗಳನ್ನು ಏರ್ಪಡಿಸಿರುವುದೂ, ಒಂದು ಗೋಷ್ಠಿಯನ್ನು ಸಂಪೂರ್ಣವಾಗಿ ಮಕ್ಕಳೇ ನಡೆಸುವಂತೆ ಮಾಡಿರುವುದೂ, ಮಕ್ಕಳ ಸಾಹಿತ್ಯ ಸೃಷ್ಟಿಯಲ್ಲಿ ಗಣನೀಯವಾದ ಪಾತ್ರ ವಹಿಸಿದ



ಹನ್ನೊಂದು ಜನ ಪ್ರತಿಭಾನ್ವಿತ ಮಕ್ಕಳ ಸಾಹಿತಿಗಳನ್ನು ಸನ್ಮಾನಿಸುತ್ತಲಿರುವುದೂ, ಮಕ್ಕಳ ಸಾಹಿತ್ಯದ ವಿವಿಧ ಮುಖಗಳ ಪರಿಚಯ ಮಾಡಿಕೊಡುವ ಸ್ಮರಣ ಸಂಚಿಕೆಯೊಂದನ್ನು ಹೊರತಂದಿರುವುದೂ. ಪ್ರೇಕ್ಷಣೀಯವಾದ ಪ್ರದರ್ಶನವೊಂದನ್ನು ವ್ಯವಸ್ಥೆಗೊಳಿಸಿರುವುದೂ, ಮಕ್ಕಳಿಗೆ ಪ್ರಶಸ್ತಿ ಪ್ರದಾನ ಮಾಡುತ್ತಲಿರುವುದೂ, ಮಕ್ಕಳಿಂದ ಮನರಂಜನೆಯ ಕಾರ್ಯಗಳನ್ನು ಹಮ್ಮಿಕೊಂಡಿರುವುದೂ, ಇವೆಲ್ಲಕ್ಕೆ ಕಳಸವಿಡುವಂತೆ ಸಮ್ಮೇಳನದ ಹೆಗ್ಗುರುತೊಂದು ಧಾರವಾಡದಲ್ಲಿ ಸ್ಥಿರವಾಗಿ ಉಳಿಯುವಂತೆ ಮಾಡಬೇಕೆಂದು ಆಲೋಚಿಸಿರುವುದೂ ಅತ್ಯಂತ ಆಶಾದಾಯಕವಾದ ಸಂಗತಿಗಳು. ಮಾನ್ಯ ಮುಖ್ಯ ಮಂತ್ರಿಗಳೂ, ಅವರೊಡನೆ ಬೇರೆ ಮಂತ್ರಿಗಳೂ ಈಗ ಈ ವೇದಿಕೆಯ ಮೇಲೆಯೇ ಇರುವುದರಿಂದ ಇಲ್ಲಿಯೇ ಸಚಿವ ಸಂಪುಟದ ತುರ್ತುಸಭೆ ಸೇರಿಸಿ ಧಾರವಾಡದಲ್ಲಿ ಉಳಿಸಬೇಕೆಂದಿರುವ ಆ ಗುರುತಿನ ಘನಕಾರ್ಯಕ್ಕೆ ಸ್ಥಳದಲ್ಲಿಯೇ ಸ್ವೀಕೃತಿ ನೀಡಿ ಹೋಗುವರೆಂದು ಆಶಿಸುತ್ತೇನೆ.

ಕನ್ನಡದಲ್ಲಿ ಮಕ್ಕಳ ಸಾಹಿತ್ಯದ ಉಗಮ–ವಿಕಾಸಗಳ ಇತಿಹಾಸವನ್ನಿಲ್ಲಿ ಹೇಳಬಯಸುವುದಿಲ್ಲ ನಾನು. ಆ ವಿಷಯಕ್ಕಾಗಿಯೇ ಗೋಷ್ಠಿಯೊಂದು ಸೇರಲಿದೆ. ಸಿಂಹಾವಲೋಕನ ಕ್ರಮದಿಂದ ಕನ್ನಡದಲ್ಲಿ ಇದುವರೆಗೆ ಆಗಿರುವ ಮಕ್ಕಳ ಸಾಹಿತ್ಯ ಸೃಷ್ಟಿಯ ವಿಶ್ಲೇಷಣೆಯನ್ನು ಮಾಡಿದರೆ ಸಾಕೆನ್ನಿಸುತ್ತಿದೆ. ಅಂತರರಾಷ್ಟ್ರೀಯ ಮಕ್ಕಳ ವರ್ಷದ ನೆನಪಿಗಾಗಿ ಮೈಸೂರು ವಿಶ್ವವಿದ್ಯಾಲಯದ ಪ್ರಸಾರಾಂಗವು 1979ರಲ್ಲಿ ಪ್ರಕಟಿಸಿರುವ 'ಕನ್ನಡ ಗ್ರಂಥ ಸೂಚಿ'ಯ ಆರನೆಯ ಸಂಪುಟದ ಪ್ರಕಾರ ಆ ವರ್ಷದವರೆಗೆ ಕನ್ನಡದಲ್ಲಿ ಮಕ್ಕಳ ಸಾಹಿತ್ಯವೆನ್ನಬಹುದಾದ 3421 ಕೃತಿಗಳು ಪ್ರಕಟವಾಗಿವೆ. ಮಕ್ಕಳಿಗಾಗಿ ಎಂದು ಉದ್ದೇಶಿತವಾಗಿ ಈಸೋಪನ ಕೆಲವು ನೀತಿಕತೆಗಳ ಸಂಕಲನವು 1845ರಲ್ಲಿ ಪ್ರಕಟವಾದ ಕಾರಣ ಅದನ್ನು ಬುನಾದಿ ವರ್ಷವೆಂದು ಪರಿಗಣಿಸಲಾಗಿದೆ. ಅಲ್ಲಿಂದ 1968ರವರೆಗೆ ಎಂದರೆ 124 ವರ್ಷಗಳ ಅವಧಿಯಲ್ಲಿ 1960 ಕೃತಿಗಳು ಪ್ರಕಟವಾಗಿದ್ದರೆ, 1968ರಿಂದ 1979ರವರೆಗಿನ ಕೇವಲ 11 ವರ್ಷಗಳ ಅವಧಿಯಲ್ಲಿ 2061 ಕೃತಿಗಳು ಪ್ರಕಟವಾಗಿವೆ. 1979 ರಿಂದೀಚೆಗೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಮಕ್ಕಳ ಸಾಹಿತ್ಯ ನಿರ್ಮಾಣವಾಗಿರಲೇಬೇಕು. ಈಗ ಪ್ರೋತ್ಸಾಹ ಹೆಚ್ಚಿದೆ. ಬೇಡಿಕೆ ಹೆಚ್ಚಿದೆ, ಮಕ್ಕಳ ಸಾಹಿತಿಗಳೂ ಹೆಚ್ಚಿದ್ದಾರೆ, ಶಾಲೆಗೆ ಹೋಗುವ ಮಕ್ಕಳ ಸಂಖ್ಯೆಯೂ ಹೆಚ್ಚಿದೆ. ಈ ಐದುವರ್ಷಗಳ ಅವಧಿಯಲ್ಲಿ ಒಂದೂವರೆ ಸಾವಿರ ಕೃತಿಗಳು ಪ್ರಕಟವಾಗಿವೆಯೆಂದು ಅಂದಾಜು ಮಾಡಲಾಗಿದ್ದು ಇವೂ ಸೇರಿ ಒಟ್ಟು 5000 ಮಕ್ಕಳ ಸಾಹಿತ್ಯ ಕೃತಿಗಳು ಕನ್ನಡದಲ್ಲಿವೆಯೆಂದು ಹೇಳಬಹುದಾಗಿದೆ. ವೈಪುಲ್ಯದ ದೃಷ್ಟಿಯಿಂದ ಕನ್ನಡದಲ್ಲಿ ಈವರೆವಿಗೆ ಪ್ರಕಟವಾದ ಮಕ್ಕಳ ಸಾಹಿತ್ಯ ಅಗಾಧವಾದುದೇನೂ ಅಲ್ಲವಾದರೂ ವೈವಿಧ್ಯದ ದೃಷ್ಟಿಯಿಂದ, ಗುಣಮಟ್ಟದ ದೃಷ್ಟಿಯಿಂದ ವಿಶೇಷವಾದುದೆಂದೇ ಹೇಳಬೇಕು. ಇದರಲ್ಲಿ

ಸಹಜವಾಗಿಯೇ ಕತೆ ಕವಿತೆಗಳಿಗೆ ಸಿಂಹಪಾಲು ದೊರೆತಿದೆಯಾದರೂ ಉಳಿದ ಸಾಹಿತ್ಯ ಪ್ರಕಾರಗಳು ಉಪೇಕ್ಷಿತವಾಗಿಲ್ಲ. ಒಂದಲ್ಲ, ಮೂರು ಮಕ್ಕಳ ವಿಶ್ವಕೋಶಗಳು–ಎರಡು ಮಕ್ಕಳ ನಿಘಂಟುಗಳು–ವರ್ಣರಂಜಿತ ಸಚಿತ್ರ ಶಾಲಾ ನಿಘಂಟು ಮತ್ತು ಆಕ್ಸ್‌ಫರ್ಡ್ ಸಚಿತ್ರ ನಿಘಂಟು–ಮಾನವಿಕಗಳು ಮತ್ತು ಸಮಾಜ ಶಾಸ್ತ್ರಗಳನ್ನು ಕುರಿತ, ಎಂಜಿನಿಯರಿಂಗ್ ಮತ್ತು ತಂತ್ರವಿಜ್ಞಾನ, ಗಣಿತ ವಿಜ್ಞಾನ, ಖಗೋಳ ವಿಜ್ಞಾನ, ಪ್ರಾಣಿ ವಿಜ್ಞಾನ, ಭೂವಿಜ್ಞಾನ, ರಸಾಯನವಿಜ್ಞಾನ, ವೈದ್ಯವಿಜ್ಞಾನ, ಸಸ್ಯ ವಿಜ್ಞಾನ ಇತ್ಯಾದಿಗಳನ್ನು ಕುರಿತ ನೂರಾರು ಕೃತಿಗಳು, ಆಡಳಿತಗಾರರು, ಉದ್ಯಮಿಗಳು, ಎಂಜಿನಿಯರರು, ಐತಿಹಾಸಿಕ ವ್ಯಕ್ತಿಗಳು, ಕಲಾವಿದರು, ಕವಿಗಳು, ಕ್ರೀಡಾಪಟುಗಳು, ಗ್ರಂಥಪಾಲರು, ದಾರ್ಶನಿಕರು, ಧಾರ್ಮಿಕ ಮಹಾಪುರುಷರು, ಪತ್ರಿಕೋದ್ಯಮಿಗಳು, ಮುತ್ಸದ್ಧಿಗಳು, ವಕೀಲರು, ವಿಜ್ಞಾನಿಗಳು, ವೈದ್ಯರು, ಶಾಸನತಜ್ಞರು, ಶಿಕ್ಷಣತಜ್ಞರು, ಸಮಾಜ ಸುಧಾರಕರು, ಸರ್ವೋದಯ ನಾಯಕರು ಮುಂತಾದವರನ್ನು ಕುರಿತ ಜೀವನ ಚರಿತ್ರೆಗಳು, ಐತಿಹಾಸಿಕ, ಪೌರಾಣಿಕ, ಸಾಮಾಜಿಕ ನಾಟಕಗಳು, ಕೆಲವು ಕಾದಂಬರಿಗಳು, ಪ್ರವಾಸ ಕಥನಗಳು, ಭಾಷಾ ವಿಜ್ಞಾನ ಹಾಗೂ ಭಾಷೆಗೆ ಸಂಬಂಧಿಸಿದ ಕೃತಿಗಳು, ಲಲಿತಕಲೆಗಳನ್ನು ಕುರಿತ ಕೃತಿಗಳು – ಹೀಗೆ ಜ್ಞಾನ ವಿಜ್ಞಾನ ಶಾಸ್ತ್ರ ಕಲೆಗಳ ಹಲವು ಕ್ಷೇತ್ರಗಳನ್ನು ಪರಿಚಯಿಸುವ ನೂರಾರು ಒಳ್ಳೆಯ ಕೃತಿಗಳು ನಮ್ಮ ಮಕ್ಕಳಿಗಾಗಿ ಬಂದಿವೆ. ಐದಾರು ನೂರು ಮಕ್ಕಳ ಸಾಹಿತಿಗಳೂ, ನಾಲ್ಕೈದುನೂರು ಪ್ರಕಾಶಕರೂ, ಒಂದು ನೂರಕ್ಕೂ ಮಿಕ್ಕಿರುವ ಗ್ರಂಥಮಾಲೆಗಳ ಸಂಪಾದಕರೂ ಸೇರಿ ಈ ಬಾಲ ಸಾಹಿತ್ಯ ಯಜ್ಞವನ್ನು ಸಾಂಗಗೊಳಿಸಿದ್ದಾರೆ. ಅವರೆಲ್ಲರೂ ಅಭಿನಂದನಾರ್ಹರು, ಅಭಿನಂದನೀಯರು. ಇವರೆಲ್ಲರ ನಾಮನಿರ್ದೇಶನ ಇಲ್ಲಿ ಸಾಧ್ಯವಿಲ್ಲವಾದರೂ ಇವರಲ್ಲಿ ಪ್ರಮುಖರಾದವರ ಉಲ್ಲೇಖ ವಿಷಯಾನುಸಾರ ಮುಂದೆ ಬರದಿರದು.

ಒಂದು ಹೆಮ್ಮೆಯ, ಹಿಗ್ಗಿನ ಅಂಶವನ್ನಿಲ್ಲಿ ಗಮನಿಸಲೇಬೇಕು. 1927ರಷ್ಟು ಹಿಂದೆಯೇ ಆಚಾರ್ಯ ಬಿ.ಎಂ.ಶ್ರೀ ಅವರು ಕಲಬುರಗಿಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪೀಠದಿಂದ ಸಾರಿದ್ದರು : "ನಮ್ಮ ಹೊಸ ಲೇಖಕನು ಹಿರಿಯರ ಸೇವೆಯಲ್ಲಿ ಸಣ್ಣ ಮಕ್ಕಳನ್ನು ಮರೆಯುವುದಿಲ್ಲ. 'ಮನುಜನಿಗೆ ಮಗು ತಂದೆ' ಎಂಬ ತತ್ವವನ್ನು ಈತನು ಬಲ್ಲನು. ಆದುದರಿಂದ ಆ ಚಿಕ್ಕ ಮಕ್ಕಳನ್ನು ತನ್ನ ಕಡೆಗೆ ಒಲಿಸಿ ಕೊಂಡು ಅವರಿಗೆ ಬೇಕಾದ, ಪುಟ್ಟವಾದ ಚಿತ್ರಗಳಿಂದ ಕೂಡಿರುವ, ಮುದ್ದಾದ ಬಾಲಶೈಲಿಯಲ್ಲಿ ಬರೆದಿರುವ ಸಾಹಸ ಕಥೆಗಳು, ಆಶ್ಚರ್ಯ ಕಥೆಗಳು, ದೇಶ ಸಂಚಾರಗಳು, ಸಮುದ್ರಯಾನಗಳು, ಪ್ರಕೃತಿಶಾಸ್ತ್ರದ ಅದ್ಭುತ ನಿರ್ಮಾಣಗಳು, ಭರತಖಂಡದ ಪೂರ್ವ ಚರಿತ್ರೆಯ ಸಾರಾಂಶಗಳು, ವೀರರ ನೈಜ ವೃತ್ತಾಂತಗಳು - ಮುಂತಾದುವನ್ನು



ಮೊದಲು ಸಿದ್ಧ ಮಾಡುವನು. ಆಮೇಲೆ ದೊಡ್ಡವರಿಗೆ ಬೋಧನೆ ಮಾಡುವುದಕ್ಕೆ ಹೊರಟು...ಹೊಸ ಬೆಳೆಯನ್ನು ನೂರರಷ್ಟು ಹೆಚ್ಚಿಸುವನು."

ಅವರ ಈ ಮುಂಗಾಣ್ಕೆ ಹುಸಿಯಾಗದಂತೆ ನಮ್ಮ ಸಾಹಿತ್ಯ ಪ್ರಪಂಚದ ಹಿರಿಯರಲ್ಲಿ ಹಿರಿಯರಾಗಿದ್ದವರು ಸಹ ಚಿಕ್ಕ ಮಕ್ಕಳನ್ನು ಮರೆಯಲಿಲ್ಲ. ಸರ್ವಶ್ರೀ ಎಂ. ಎಸ್. ಪುಟ್ಟಣ್ಣನವರು, ಚ. ವಾಸುದೇವಯ್ಯನವರು, ಶಾಂತಕವಿಗಳು, ಡೆಪ್ಯುಟಿ ಚೆನ್ನಬಸಪ್ಪನವರು.ಎಂ.ಎನ್. ಕಾಮತ್ ಅವರು. ಪಂಜೆ ಮಂಗೇಶರಾಯರು, ಸುಬೋಧ ರ.ಮರಾಯರು. ಆರ್. ನರಸಿಂಹಾಚಾರ್ಯರು, ಹರ್ಡೇಕರ್ ಮಂಜಪ್ಪನವರು, ಹೊನ್ನಾಪುರಮಠ ಗದಿಗೆಯ್ಯನವರು, ಎ.ಆರ್. ಕೃಷ್ಣಶಾಸ್ತ್ರಿಗಳು, ಡಿ.ವಿ.ಜಿ ಅವರು, ದೇವುಡು ನರಸಿಂಹಶಾಸ್ತ್ರಿಗಳು, ಕುವೆಂಪು ಅವರು, ಜಿ.ಪಿ. ರಾಜರತ್ನಂ ಅವರು, ಶಿವರಾಮ ಕಾರಂತ ಅವರು, ಅ. ನ. ಕೃಷ್ಣರಾಯರು, ಬೆಟಗೇರಿ ಕೃಷ್ಣಶರ್ಮರು, ಹೊಯಿಸಳರು, ದಿನಕರ ದೇಸಾಯಿ ಅವರು, ರಾಘವ ಅವರು, ಎಲ್. ಗುಂಡಪ್ಪ ಅವರು, ಜಿ. ವರದರಾಜರಾವ್ ಅವರು, ಡಿ.ಎಸ್. ಕರ್ಕಿ ಅವರು ಮಕ್ಕಳ ಸಾಹಿತ್ಯ ಭಂಡಾರಕ್ಕೆ ಕೃತಿರತ್ನಗಳನ್ನು ಸೇರಿಸುತ್ತಲೇ ದೊಡ್ಡವರ ಸಾಹಿತ್ಯ ಸೃಷ್ಟಿಯನ್ನು ನಡೆಸಿದರು ; ಈ ನಾಡಿನ ಮಕ್ಕಳು ಧನ್ಯರಾಗುವಂತೆ ಮಾಡಿದರು. ಇವರ ಮೇಲ್ಪಂಕ್ತಿಯನ್ನು ಅನುಸರಿಸಿ ಹೊಸ ಹುರುಪಿನ ಮಕ್ಕಳ ಸಾಹಿತಿಗಳು ಮುಂದೆ ಬಂದರು. ಅವರಲ್ಲಿ ಅನೇಕರು ತಮ್ಮ ಲೆಖನಿಯನ್ನು ಮಕ್ಕಳ ಸಾಹಿತ್ಯಕ್ಕೇ ಮೀಸಲಾಗಿಸಿದರು. ಇದರಿಂದ ಕನ್ನಡದಲ್ಲಿ ಮಕ್ಕಳ ಸಾಹಿತ್ಯ ಸಮೃದ್ಧವಾಗಿ ಬೆಳೆಯಲು ಅವಕಾಶವಾಯಿತು. ಇದರತ್ತ ಹಕ್ಕಿ ನೋಟವೊಂದನ್ನು ಹರಿಸೋಣ.

ಮಕ್ಕಳೆಂದ ಮೇಲೆ ರಂಜಕ, ರೋಚಕ, ರೋಮಾಂಚಕ ಕತೆಗಳಿಗೆ ಆದ್ಯತೆ ಅನಿವಾರ್ಯ. ಅಜ್ಜಿಯರು ಹೇಳುವ ಕತೆಗಳನ್ನು ಕೇಳುತ್ತಲೇ ಬೆಳೆಯುವ ಮಕ್ಕಳು ಹೊಸ ಹೊಸ ಕತೆಗಳಿಗಾಗಿ ಹಾತೊರೆಯುವುದು ಸಹಜ, ಸ್ವಾಭಾವಿಕ. ಇದಕ್ಕೆ ತಕ್ಕಂತೆ ಕನ್ನಡದಲ್ಲಿ ಮಕ್ಕಳ ಕತೆಗಳು 'ಬಂಪರ್' ಬೆಳೆಯಾಗಿ ಬಂದಿವೆ. ಪಂಚತಂತ್ರದ ಕತೆಗಳು, ಈಸೋಪನ ಕತೆಗಳು. ಹಿತೋಪದೇಶ ವೇತಾಳ ಪಂಚವಿಂಶತಿಗಳ ಕತೆಗಳು, ಅರೇಬಿಯನ್ ನೈಟ್ಸ್ ಕತೆಗಳು, ಸಿಂದಬಾದ್ ನಾವಿಕನ ಕತೆಗಳು, ಬೈಬಲ್ ಕತೆಗಳು, ರಾಮಾಯಣ ಮಹಾಭಾರತ ಭಾಗವತ ಹಾಗೂ ಪುರಾಣಗಳಿಂದ ಆಯ್ದ ಕತೆಗಳು, ಗ್ರಿಮ್ ಸೋದರರ ಕತೆಗಳು, ಬೀರಬಲ್ ತೆನಾಲಿರಾಮಕೃಷ್ಣರ ಕತೆಗಳು, ಹೇನಿಷ್ ಕ್ರೈಲಾಫ್ ಕತೆಗಳು, ಅಮೇರಿಕಾ. ಇರಾನ್. ಗ್ರೀಸ್, ಚೈನಾ, ಜಪಾನ್, ರಷ್ಯಾ, ಇಂಗ್ಲೆಂಡ್ ಇತ್ಯಾದಿ ದೇಶಗಳ ಕತೆಗಳು, ಸ್ವದೇಶದಲ್ಲಿಯೇ ಗುಜರಾತೀ, ಮರಾಠಿ, ತಮಿಳು ತೆಲುಗು, ಮಲಯಾಳಿ, ಬಂಗಾಳಿ. ಹಿಂದಿ. ಉರ್ದು ಇತ್ಯಾದಿ ಭಾಷೆಗಳಿಂದ ಬಂದ ಕತೆಗಳು, ಜಾನಪದ ಕತೆಗಳು. ಸ್ವತಂತ್ರವಾಗಿ ರಚಿತವಾದ ಕನ್ನಡ ಕತೆಗಳು – ಒಟ್ಟಿನಲ್ಲಿ ಎಲ್ಲ ಬೆಡಗು ಬಣ್ಣಗಳ ಕತೆಗಳು ಕನ್ನಡ ಮಕ್ಕಳಿಗಾಗಿ ಬಂದಿವೆ.

ಆದರೆ ಅವಿನ್ನೂ ಎಲ್ಲ ಕನ್ನಡ ಮಕ್ಕಳ ಕೈಗಳಿಗೆ ಮುಟ್ಟಿಲ್ಲ. ಎಲ್ಲವೂ ಉಪಲಬ್ಧವಿಲ್ಲ. ಉಪಲಬ್ಧವಿರುವಷ್ಟೂ ಒಂದೆಡೆಗೆ ದೊರೆಯುವುದಿಲ್ಲ ; ದೊರೆತಷ್ಟಕ್ಕೂ ಪಾಲಕರ ಪ್ರೋತ್ಸಾಹವಿಲ್ಲ ; ಸರಕಾರದ ಆಶ್ರಯವಿಲ್ಲ.

ಇದಾಗಲೇ ಉಲ್ಲಿಖಿತರಾಗಿರುವ ಮಹನೀಯರಲ್ಲದೆ ಮೇವುಂಡಿ ಮಲ್ಲಾರಿ ಅವರು. ಟಿ ಎಂ ಆರ್. ಸ್ವಾಮಿ ಅವರು. ಎಂ.ಎಸ್. ರಾಮರಾಯರು, ಭಾರತೀಸುತರು, ಕುಮಾರು ವೆಂಕಣ್ಣ ಅವರು ಎಂ. ರಾಮರಾವ್ ಅವರು, ಐರೋಡಿ ಶಿವರಾಮಯ್ಯನವರು. ಚಂದ್ರರ ಜಶೆಟ್ಟಿ ಅವರು, ಚುಳಕಿ ಅವರು, ದಾಮೋದರ ಬಾಳಿಗ ಅವರು, 'ಸೋಮೇಶ ಸಖ' ಅವರು, ಬಿ.ಶ್ರೀ. ಪಾಂಡುರಂಗರಾಯರು ಎಚ್ ಎಮ್. ಶಂಕರ ನಾರಾಯಣ ಅವರು. ಪಳಕಳ ಸೀತಾರಾಮ ಭಟ್ಟರು, 'ಸಿಸು' ಸಂಗಮೇಶ ಅವರು, 'ನವಗಿರಿನಂದ' ಅವರು. ಅನಂತರ ವ್ ಭೋಸಗೆ ಅವರು, ಬಿ. ಶಂಕರಭಟ್ಟರು, ಮತಿಘಟ್ಟ ಕೃಷ್ಣಮೂರ್ತಿ ಅವರು, ನರಸಿಂಗರಾವ್ ಮಳಗಿ ಅವರು, ಹೊರೆಯಾಲ ದೊರೆಸ್ವಾಮಿ ಅವರು. ಮನೋಹರ ಘಾಣೇಕರ್ ಅವರು, 'ಶ್ರೀರವಿ' ಅವರು ಬಿ ಎಸ್. ಸ್ವಾಮಿ ಅವರು, ಪಿ.ಎಂ. ಗಲಗಲಿ ಅವರು, 'ಮಾದೇವ ಮಿತ್ರ' ಅವರು ಜಿ.ಆರ್ ಲಕ್ಷ್ಮಣ್‌ರಾವ್ ಅವರು, 'ಗೌರೀಶಂ' ಅವರು, ಚ.ವಿ. ಕವಲಿ ಅವರು, ಹೋ. ಶ್ರೀನಿವಾಸಯ್ಯನವರು, ಈಶ್ವರ ಕಮ್ಮಾರ ಅವರು, 'ಪರಿಮಳ' ಅವರು, ಪರಶುರಾಮ ಚಿತ್ರಗಾರ ಅವರು, ರಸಿಕ ಪುತ್ತಿಗೆ ಅವರು. ಪಿ.ವಿ. ಚಂದ್ರಶೇಖರ ಅವರು 'ಕಾಕೆಮಾನಿ' ಅವರು. ದು.ನಿ. ಬೆಳಗಲಿ ಅವರು. ನೀಲತ್ತಹಳ್ಳಿ ಕಸ್ತೂರಿ ಅವರು, ಸೋಮಯಾಜಿ ಅವರು. 'ಬಾಲಬಂಧು' ಅವರು, ಸಿಂಪಿ ಲಿಂಗಣ್ಣನವರು, ಡಾ. ವರದರಾಜ ಹುಯಿಲಗೋಳ ಅವರು, ಡಾ॥ ಅನುಪಮಾ ನಿರಂಜನ ಅವರು, ಗೀತಾ ಕುಲಕರ್ಣಿ ಅವರು, ಬಿ. ರುಕ್ಕಮ್ಮ ಅವರು. ಶಾಂತಾದೇವಿ ಮಾಳವಾಡ ಅವರು, ಕಮಲಾ ಹಂಪನಾ ಅವರು, ಆರ್ಯಾಂಬ ಪಟ್ಟಾಭಿ ಅವರು, ಜಗ್ಗು ಪ್ರಿಯದರ್ಶಿನಿ, ಅವರು, ಎಚ್. ಎಸ್. ಪಾರ್ವತಿ ಅವರು, ಎಚ್. ವಿ. ಸಾವಿತ್ರಮ್ಮ ಅವರು, ಉಮಾದೇವಿ ಶಂಕರರಾವ್ ಅವರು, ಎಸ್.ಕೆ. ರಮಾದೇವಮ್ಮನವರು, ಕೆ. ಟಿ. ಬನಶಂಕರಮ್ಮನವರು, ಲಲಿತಾ ಚಂದ್ರಶೇಖರ್ ಅವರು, ವನಮಾಲ ಆಚಾರ ಅವರು, ಟಿ. ಸುನಂದಮ್ಮ ಅವರು. ಪದ್ಮಾಶೆಣೈ ಅವರು, ಸರಿತಾ ಜ್ಞಾನಾನಂದ ಅವರು, ವಿ. ಪಂಕಜ ಅವರು, ಇಲ್ಲಿ ಹೆಸರಿಸಲಾಗದ ಇನ್ನೂ ಅನೇಕರು ಕನ್ನಡದ ಮಕ್ಕಳ ಕತೆಗಳ ಕಣಜವನ್ನು ತುಂಬಿದ್ದಾರೆ. ಈ ಕತೆಗಳಲ್ಲಿ ಕಂಡು ಬರುವ ವಸ್ತು ವೈವಿಧ್ಯ ಪ್ರಶಂಸನೀಯವಾದುದು. ಪ್ರಾಣಿಗಳ ಸುತ್ತ ಹೆಣೆದ ಕತೆಗಳಿವೆ ; ಪುರಾಣಗಳಿಂದ, ಮಹಾಕಾವ್ಯಗಳಿಂದ, ನಾಟಕಗಳಿಂದ ಆಯ್ದು ನೆಯ್ದ ಕತೆಗಳಿವೆ ; ಅದ್ಭುತ ರಮ್ಯತೆಗೆ ಆದ್ಯತೆಯಿರುವ ಯಕ್ಷ ಯಕ್ಷಿಣಿಯರ. ಸುರ–ಕಿನ್ನರ–ಕಿಂಪುರುಷರ, ಭೂತ ಬೇತಾಳ ರಕ್ಕಸರ, ಇಂದ್ರಜಾಲ ಮಹೇಂದ್ರಜಾಲಗಳ ಕತೆಗಳಿವೆ; ಇತಿಹಾಸದಿಂದೆತ್ತಿಕೊಂಡ ವೀರ



ಪುರುಷರ. ವೀರವನಿತೆಯರ ಕತೆಗಳಿವೆ. ಧರ್ಮ ಪ್ರಪಂಚದಿಂದ ಪಡೆದ ಮತ ಸ್ಥಾಪಕರ. ಸಂತ–ಶರಣ–ದಾಸರ ಕತೆಗಳಿವೆ : ಜನಪದರ ಮಡಿಲಲ್ಲಿ ಹುಟ್ಟಿ ಬೆಳೆದ ಜಾನಪದ ಕತೆಗಳಿವೆ ; ಸ್ವತಂತ್ರ ಕತೆಗಳಿವೆ : ಭಾಷಾಂತರಿತ ಕತೆಗಳಿವೆ ; ರೂಪಾಂತರಿತ ಕತೆಗಳಿವೆ : ಶ್ರೀ ರಾಜಶೇಖರ ಭೂಸನೂರಮಠರಂಥವರು ಬರೆದ ವಿಜ್ಞಾನ ಕೇಂದ್ರಿತ ಕತೆಗಳೂ ಇವೆ.

ಕನ್ನಡದಲ್ಲಿ ಮಕ್ಕಳಿಗಾಗಿಯೇ ಬರೆದ ನೀಳ್ಗತೆಗಳು, ಕಾದಂಬರಿಗಳು ಬಹಳ ಕಡಮೆ ಶ್ರೀ ಎಂ. ಸಿ. ಮನೋಹರ ಚಂದ್ರನ್ ಅವರು "ಪೂಪಕಾಡಿನಲ್ಲಿ ಪಾಪು" ಶ್ರೀಮತಿ ನಿರುಪಮಾ ಅವರ "ಅಮೃತ ಕಲಶ" ಮತ್ತು ರಸಿಕ ಪುತ್ತಿಗೆ ಯವರ "ಕೆಂಪು ಕಾರು" ನನ್ನ ದೃಷ್ಟಿಗೆ ಬಿದ್ದಿರುವ ವಿರಲಕೃತಿಗಳು. ಬಾಲ ಸಾಹಿತ್ಯದ ಈ ಪ್ರಕಾರ ಬಾಲ್ಯಾವಸ್ಥೆಯಲ್ಲಿಯೇ ಇದೆ. ಇನ್ನೂ ಇದರ ಸಾಧ್ಯತೆಗಳನ್ನೆಲ್ಲ ಸೂರೆಗೊಳ್ಳುವವರು ಮುಂದೆ ಬರಬೇಕಾಗ. "ಮುಂದೆ ಬರಬೇಕು" ಎಂದಿದ್ದೇನೆ - "ಹುಟ್ಟಬೇಕು" ಎಂದಿಲ್ಲ, ಯಾಕೆಂದರೆ ಈಗ ಇರುವ, ಇಷ್ಟರಲ್ಲಿಯೇ ಮುಂದೆ ಬರಲಿರುವ ಮಕ್ಕಳ ಸಾಹಿತಿಗಳಲ್ಲಿಯೇ ಹಲವರು ಹೇಳಿ ಮಾಡಿಸಿದಂತಿರಬೇಕು ಮಕ್ಕಳ ಕಾದಂಬರಿಗಳನ್ನು ಬರೆಯಲು. ಅವರು ತಮ್ಮಲ್ಲಿ ಅವಿತಿರುವ ಈ ಶಕ್ತಿಯನ್ನು ಗುರುತಿಸಿಕೊಂಡು ಮುಂದೆ ಬಂದು ಮಕ್ಕಳ ಕಾದಂಬರಿಗಳ ಕೊರತೆಯನ್ನು ನೀಗಬೇಕೆಂಬುದು ನನ್ನ ಬಯಕೆ, ಹಾರೈಕೆ. ಈ ಕಾದಂಬರಿಗಳು ವಿಜ್ಞಾನ–ಪ್ರೇರಿತ, ವಿಜ್ಞಾನ–ಪ್ರಚೋದಕ ಕಾದಂಬರಿಗಳಾದರೆ ಕಬ್ಬಿನ ಮೇಲೆ ಜೇನಿಟ್ಟಂತೆ. ನಮ್ಮ ಮಕ್ಕಳು 'ಮರಿವಿಜ್ಞಾನಿ'ಗಳೆಂಬುದನ್ನು ನಮ್ಮ ಸ್ವಾತಂತ್ರ್ಯೋದಯದವರ್ಷದಲ್ಲಿಯೇ ಗುರುತಿಸಿದರು ರಾಷ್ಟ್ರಕವಿ ಕುವೆಂಪು ಅವರು :

"ಮಳೆಯೆಂದರೇನಮ್ಮ ? ಗುಡುಗೆಂದರೇನಮ್ಮ ?

'ಮಿಂಚೆಂದರೇನಮ್ಮ ? ಮುಗಿಲೆಂದರೇನಮ್ಮ ? " ಎಂದು ಅಂದಿನ 'ಮರಿ ವಿಜ್ಞಾನಿ'ಗಳು ಕೇಳಿದ್ದರೆ, " 'ಕ್ಷಿಪಣಿಯೆಂದರೇನಮ್ಮ ? ರಾಕೆಟ್ಟೆಂದರೇನಮ್ಮ ? ಕಂಪ್ಯೂಟರೆಂದರೇನಮ್ಮ ? ರೊಬೋಟ್–ಎಂದರೇನಮ್ಮ ?" ಎಂದು ಇಂದಿನ ಮಕ್ಕಳು ಕೇಳುವುದು ಸಹಜ. ದಿವಸಕ್ಕೊಂದು ಹೊಸ ಅವಿಷ್ಕಾರ ಹೊರಬಿದ್ದು ಎಲ್ಲರನ್ನೂ ಆಹ್ವಾನಿಸುತ್ತಿರುವಾಗ ನಮ್ಮ ಮಕ್ಕಳೂ. "ಇವುಗಳನ್ನು ನಮ್ಮ ಮನಗಳಿಗೆ ಒಗ್ಗುವಂತೆ, ನಮ್ಮ ಅರಿವಿನ ಪರಿಧಿ ಹಿಗ್ಗುವಂತೆ, ನಮ್ಮ ಕುತೂಹಲ, ಲವಲವಿಕೆ, ಉತ್ಸಾಹ ಕತೆಗಳು ಮುನ್ನುಗ್ಗುವಂತೆ, ಮನೋರಂಜನೆಯೊಡನೆ ಮನೋವಿಕಾಸವೂ ಆಗುವಂತೆ ಕಾದಂಬರಿಗಳನ್ನಾಗಿ ಕುಸುರಿಸಿ ನಮಗೆ ಕೊಡಿರಿ" ಎಂದು ಕೇಳುವುದೂ ಸಹಜವೇ. ಅವರು ಕೇಳದಿದ್ದರೂ ಅವರಲ್ಲಿ ವೈಜ್ಞಾನಿಕ ಮನೋಧರ್ಮ ಬೆಳೆಯಲೆಂದು ನಮ್ಮ ಮಕ್ಕಳ ಸಾಹಿತಿಗಳು ತಾವಾಗಿಯೇ ಮುಂದೆ ಬಂದು ರೋಚಕ ವೈಜ್ಞಾನಿಕ ಕಾದಂಬರಿಗಳನ್ನು ರಚಿಸಿಕೊಡಬೇಕು. ಬೇರೆ ಭಾಷೆಗಳಲ್ಲಿ ಇದಾಗಲೇ ಪ್ರಸಿದ್ಧಿ ಪಡೆದಿರುವ

ಇಂಥ ಕಾದಂಬರಿಗಳ ಅನುವಾದಗಳನ್ನು ಕೊಡುವುದರ ಜೊತೆಗೆ ಸ್ವತಂತ್ರ ವೈಜ್ಞಾನಿಕ ಕಾದಂಬರಿಗಳನ್ನು ರಚಿಸಿ ಕೃತಾರ್ಥರಾಗಬೇಕು. ಈ ದೇಶದಲ್ಲಿ ಆಳವಾಗಿ ಬೇರೂರಿ, ದಟ್ಟವಾಗಿ. ಉಸಿರುಗಟ್ಟುವಂತೆ ಬೆಳೆದಿರುವ ಜಾತಿ ವ್ಯವಸ್ಥೆ, ಅಂಧಶ್ರದ್ಧೆ. ಕಂದಾಚಾರಗಳು, ದ್ವೇಷಾಸೂಯೆಗಳು, ಪ್ರಾರಬ್ಧವಾದ-ಕರ್ಮವಾದಗಳು. ಜನ್ಮ-ವೃತ್ತಿ-ಮೂಲವಾದ ಮೇಲು ಕೀಳಿನ ಕಲ್ಪನೆಗಳು, ದೇವರು-ಧರ್ಮಗಳ ಹೆಸರಿನಲ್ಲಿ ನಡೆಯುತ್ತ ಬಂದಿರುವ ಸುಲಿಗೆ ಶೋಷಣೆಗಳು, ಇನ್ನೂ ಅನೇಕ ಅನಿಷ್ಟಗಳು, ಅರಿಷ್ಟಗಳು ದೂರಾಗಲು ದಾರಿಯೊಂದೇ-ನಮ್ಮ ಮಕ್ಕಳಲ್ಲಿ ವೈಜ್ಞಾನಿಕ ವೈಚಾರಿಕ ಮನೋಧರ್ಮವನ್ನು ಬೆಳೆಸುವುದು. ಇದು ವಿಜ್ಞಾನಪ್ರಧಾನವಾದ ಮಕ್ಕಳ ಕತೆ ಕಾದಂಬರಿಗಳನ್ನು ಅವರಿಗೆ ಹೇರಳವಾಗಿ ಒದಗಿಸುವುದರಿಂದ ಸಾಧ್ಯವಾಗುವುದಾಗಿ ಇತ್ತ ನಮ್ಮ ಮಕ್ಕಳ ಸಾಹಿತಿಗಳ ಚಿತ್ತ ಬೇಗ ಹರಿಯಲಿ !

ಕನ್ನಡದಲ್ಲಿರುವ ಮಕ್ಕಳ ಪದ್ಯಸಾಹಿತ್ಯ ನಿಜವಾಗಿಯೂ ಹೆಮ್ಮೆ ಪಡುವಂತಹುದು. ಶಾಂತಕವಿಗಳು, ಡೆಪ್ಯುಟಿ ಚೆನ್ನಬಸಪ್ಪನವರು, ವೆಂಕಟರಂಗೋಕಟ್ಟಿ ಅವರು, ಚ. ವಾಸುದೇವಯ್ಯನವರು, ಎಂ. ಎಸ್. ಪುಟ್ಟಣ್ಣನವರು, ಎಸ್. ಜಿ. ನರಸಿಂಹಾಚಾರ್ಯರು, ಪಂಜೆ ಮಂಗೇಶರಾಯರು ಮುಂತಾದ ಮಹನೀಯರ ಪರಿಶ್ರಮದಿಂದ ಪ್ರಕಟವಾದ ಪಠ್ಯಪುಸ್ತಕಗಳಲ್ಲಿಯೇ ಒಳ್ಳೆಯ ಮಕ್ಕಳ ಪದ್ಯಗಳು ಮೊದಲಿಗೆ ಕಾಣಿಸಿಕೊಂಡಿವೆ. ಜಾನಪದ ಜಗತ್ತಿನ ಕೊಡುಗೆಯಾದ 'ಗೋವಿನ ಹಾಡು' ಎಲ್ಲ ದೃಷ್ಟಿಯಿಂದಲೂ ಮೇಲ್ಮಟ್ಟದ ಪದ್ಯ. ಪ್ರಾತಃಸ್ಮರಣೀಯರಾದ ಪಂಜೆ ಮಂಗೇಶರಾಯರು, ಹರ್ಡೇಕರ್ ಮಂಜಪ್ಪನವರು, ಹೊಯಿಸಳರು, ಜಿ.ಪಿ. ರಾಜರತ್ನಂರವರು, ಮೇವುಂಡಿ ಮಲ್ಲಾರಿ ಅವರು, ಟಿ. ಎಂ. ಆರ್. ಸ್ವಾಮಿ ಅವರು, ದಿನಕರದೇಸಾಯಿ ಅವರು, ಬೆಟಗೇರಿ ಕೃಷ್ಣಶರ್ಮರು, ಡಿ. ಎಸ್. ಕರ್ಕಿ ಅವರು, ಅರ್ಚಿಕ ವೆಂಕಟೇಶ ಅವರು, ಮಕ್ಕಳ ಮನಸ್ಸುಗಳನ್ನು ಮುಟ್ಟಿ, ತಟ್ಟಿ, ಅಲುಗಿಸಿ ಅರಳಿಸುವಂಥ ಮಕ್ಕಳ ಪದ್ಯಗಳ ಹೆಬ್ಬೆಳಸನ್ನು ಬಿಟ್ಟು ಹೋಗಿದ್ದಾರೆ. ಕನ್ನಡ ಮಕ್ಕಳ ಸುದೈವದಿಂದ ರಾಷ್ಟ್ರಕವಿ ಕುವೆಂಪು ಅವರೂ, ಶಿವರಾಮ ಕಾರಂತರೂ, 'ರಾಘವ' ಅವರೂ, ಜಿ. ವರದರಾಜ್‌ರಾವ್‌ರವರೂ, ಎಲ್. ಗುಂಡಪ್ಪನವರೂ, ಕಯ್ಯಾರಕಿಞ್ಞಣ್ಣರೈ ಅವರೂ ಅವರ ಮಧ್ಯದಲ್ಲಿದ್ದಾರೆ. ಅನೇಕ ಹೊಸ ಮಕ್ಕಳ ಕವಿಗಳು ಹುಟ್ಟಿಕೊಂಡಿದ್ದಾರೆ. ಪಳಕಳ ಸೀತಾರಾಮಭಟ್ಟರು 'ವನವಿಹಾರಿ' (ಬ.ನ. ಸುಂದರರಾವ್) ಅವರು, ಡಾ. ಸರೋಜಿನಿ ಮಹಿಷಿ ಅವರು, 'ಚಿರಂತನ' ಅವರು, ಗುರುಪಾದಸ್ವಾಮಿ ಹಿರೇಮಠ ಅವರು, ಇಟಗಿ ರಾಘವೇಂದ್ರ ಅವರು, ಸಂಗಮೇಶ ಹೊಸಮನಿ ಅವರು. 'ಉಳುವೀಶ'ರ ಅವರು, ಸುರೇಶ್ ಹೊಸಟ್ಟಿ ಅವರು, ಪಿ.ಎಸ್. ಗಣಪಯ್ಯನವರು, ರಮಾನಂದ ಬನಾರಿ ಅವರು. ಶಂ.ಗು. ಬಿರಾದರ ಅವರು, ಪರುಶುರಾಮ ಚಿತ್ರಗಾರರು. ವೈ.ಜಿ. ಶಾಂತರಾಜಯ್ಯನವರು, ಬಿ. ಎ. ಸನದಿ ಅವರು, ಎಂ. ಡಿ. ಗೋಗೇರಿ ಅವರು,



ಅಣ್ಣಾರಾಯ ಸಾಲಿಮನಿ ಅವರು, ಎ. ಕೆ. ರಾಮೇಶ್ವರ ಅವರು, ಎಚ್. ಜೆ. ಲಕ್ಕಪ್ಪಗೌಡರು, ಈಶ್ವರ ಕಮ್ಮಾರ ಅವರು, ಕಾಶಿ ವಿಶ್ವನಾಥ ಶೆಟ್ಟಿ ಅವರು, 'ಸಿಸು' ಸಂಗಮೇಶ ಅವರು, ಕೆ. ಗೋಪಾಲ ಕೃಷ್ಣ ಭಟ್ಟ ಅವರು, ಬಿ. ರಾಮಚಂದ್ರಭಟ್ಟ ಮುಂಡಾಜೆ ಅವರು, ವಿಟ್ಲಬಾಬು ಅವರು, 'ರವಿಕಿರಣ' ಅವರು. 'ರಾಗೌ' ಅವರು, ಮುಚ್ಚಿಮಲೆ ಶಂಕರನಾರಾಯಣ ರಾವ್ ಅವರು, ಕೆ. ಸಂಜೀವಶೆಟ್ಟಿ ಅವರು, ಎಸ್.ಪಿ. ಸತೀಶ ಅವರು, ದೇಲಂಪಾಡಿ ವಿಷ್ಣುಮೂರ್ತಿ ಹೊಳ್ಳ ಅವರು, ಇನ್ನೂ ಅನೇಕರು ಮಕ್ಕಳ ಮನದ ಮೊಗ್ಗುಗಳನ್ನು ಅರಳಿಸುವಂಥ ಕವಿತೆಗಳನ್ನು ಬರೆದೂ, ಬರೆಯುತ್ತಲೂ ಇದ್ದಾರೆ. 1902ರಷ್ಟು ಹಿಂದೆಯೇ ಪಂಡಿತ ನರಹರಿ ಜಯರಾಮಚಾರ್ಯರು ತಮ್ಮ "ಅನುಕರಣ ಗೀತಲಹರಿ" ಯಲ್ಲಿ ಅಂಗಾಂಗ ಚಲನವಲನಗಳ ಮೂಲಕ ಅನುಕರಣಾತ್ಮಕವಾಗಿ ಹಾಡಬಲ್ಲ ಮುವ್ವತ್ತು ಸೊಗಸಾದ ಪದ್ಯಗಳನ್ನು ನಮ್ಮ ನಾಡಿನ ಮಕ್ಕಳಿಗೆ ಕೊಟ್ಟುದು ಸ್ಮರಣಾರ್ಹ ಸಂಗತಿಯಾಗಿದೆ. ಲಕ್ಷಣ ಪೈ, ಮುಚ್ಚಿಮಲೆ ಶಂಕರ ನಾರಾಯಣರಾವ್, ಕೆಮ್ಮೂತ್ತರು ದೊಡ್ಡಣ್ಣಶೆಟ್ರು, ಬಿ. ಎ. ಸನದಿ, ಹೊಸಬೆಟ್ಟು ವೆಂಕಟರಮಣಯ್ಯ ಕೆ. ಎಸ್. ಪದ್ಮನಾಭಾಚಾರ್ಯ, ವೇಕಟರಾಮಾಚಾರ್ಯ ಕಾವಿನ ಕಲ್ಲುಮಠ ಮೊದಲಾದವರು ಮಕ್ಕಳಿಗೆ ಅಭಿನಯಗೀತೆಗಳನ್ನು ನೀಡಿದ್ದಾರೆ. ಜಿ.ವಿ.ಡಿ; ಕೆ. ಡಿ. ರಾಜೇಂದ್ರ, 'ರಾಗೌ', ವಿ. ಎನ್. ಲಕ್ಷ್ಮೀನಾರಾಯಣರು ಶಿಶುಪ್ರಾಸಗಳನ್ನು ಕೊಟ್ಟಿದ್ದಾರೆ. ಅಬ್ದುಲ್ ರಹಿಮಾನ್, ಆರ್. ವಿ. ಕುಲಕರ್ಣಿ ಮೊದಲಾದವರು ಚುಟಕಗಳನ್ನು ಸಲ್ಲಿಸಿದ್ದಾರೆ. ಹೀಗೆ ಕನ್ನಡದಲ್ಲಿ ಮಕ್ಕಳ ಪದ್ಯಸಾಹಿತ್ಯ ವೈವಿಧ್ಯಪೂರ್ಣವೂ ಸಮೃದ್ಧವೂ ಆಗಿದ್ದು ಲಯ, ಓಘ, ಬಂಧ, ಪದಲಾಲಿತ್ಯ, ಸಹಜತೆ, ಸರಸತೆ, ಗೇಯತೆ, ನಾಟಕೀಯತೆ ಇತ್ಯಾದಿ ಯಾವ ದೃಷ್ಟಿಯಿಂದ ನೋಡಿದರೂ ಗೆದ್ದು ನಿಲ್ಲುತ್ತದೆ.

ಇದೇ ಮಾತನ್ನು ಮಕ್ಕಳ ನಾಟಕಗಳ ಬಗ್ಗೆ ಹೇಳುವಂತಿಲ್ಲ. ಮಕ್ಕಳಿಗೆಂದೇ ಉದ್ದೇಶಿತವಾದ ಸಾಹಿತ್ಯ ಎಂ. ಎನ್. ಕಾಮತರ ಕೊಡುಗೆಯಾಗಿ ಮೊದಲು ನಾಟಕ ರೂಪದಲ್ಲಿಯೇ ಬಂದರೂ, ಮುಂದೆ ಮಕ್ಕಳ ನಾಟಕಗಳು ಬಹಳಷ್ಟು ಬರಲಿಲ್ಲ. ರಾಷ್ಟ್ರಕವಿ ಕುವೆಂಪು ಆವರ 'ಮೋಡಣ್ಣನ ತಮ್ಮ' ಮತ್ತು 'ನನ್ನ ಗೋಪಾಲ,' ಕೆ.ವಿ. ಸುಬ್ಬಣ್ಣ ಅವರ 'ಕಾಡಿನ ಕಥೆ', ಹೊಯಿಸಳರ 'ಚಂದ್ರಹಾಸ' 'ವಾತಾಪಿಗಳು,' ಜಿ ಪಿ. ರಾಜರತ್ನಂ ಅವರ 'ಬೆಳೆಯುವ ಪೈರು' ಹಾಗೂ'ಧ್ವಜವಂದನೆ'ಗಳು, ಚಿ. ಸದಾಶಿವಯ್ಯನವರ 'ಸಿಂಹ,' 'ಅಮ್ಮ' 'ಶಿವಾಜಿಯ ಬಾಲ್ಯ'ಗಳು, ಬಿ. ಶ್ರೀ ಪಾಂಡುರಂಗ ರಾಯರ 'ಪುಟ್ಟೂಗಳ ನಾಟಕ ಚಕ್ರ', 'ಮುಖ್ಯಪ್ರಾಣ' 'ಉಪಾಧ್ಯಾಯ' ಹಾಗೂ ಬೈಂದೂರು ಆನಂದರಾಯರ ನಾಟಕಗಳು, ಪರಿಮಳರ 'ಬಾಪುವೀಣೆ' 'ಗಾಂಧಿ ದಂಡುಗಳು' ಮೈಸೂರಿನ ಜಯನಗರದ 'ಶಿಶು ಸಾಹಿತ್ಯ ಸಂಘ'ದಿಂದ ಪ್ರಕಟವಾದ 'ನರವಾನರ' 'ಪರೋಪಕಾರಿ' 'ವಿಚಿತ್ರ ತಕರಾರು' 'ಬೆಳ್ಳಿದೀಪ', 'ಸೊಹ್ರಾಬ್

ರುಸ್ತುಮ್, 'ಭಾರತ ವೀರರ ಎರಡು ನಾಟಕಗಳು', 'ಮೀರಾಬಾಯಿ' ಇತ್ಯಾದಿ ನಾಟಕಗಳು, ವೈ. ಎಸ್. ಗುಂಡಪ್ಪನವರ 'ಬಂಗಾರದಂಗಾಲು' ಒಳಗೊಂಡಿರುವ ನಾಲ್ಕು ನಾಟಕಗಳು. ಸ್ವಾಮಿ ಶಾಸ್ತ್ರಾನಂದಜಿಯವರ 'ಮುನಿವಾಹನ', ವೈ.ಕೆ. ತಿಮ್ಮರಸಯ್ಯನವರ 'ತರಕಾರಿ ತಂಟೆ' ಎಸ್. ಅನಂತನಾರಾಯಣರ 'ಮಾಯಾದೀಪ', ಡಿ. ಗೋವಿಂದರಾಯರ 'ರವೇದ ಉಂಡೆ', ಭೀಮರಾವ್ ಮನಸಬ್ದಾರರ 'ಧ್ರುವ', ಕೃಷ್ಣಮೂರ್ತಿ ಪುರಾಣಿಕರ 'ಮದುವೆಯ ಆಟ', ಉಳುವೀರರ 'ಬಾಲ ತಪಸ್ವಿ', ಉ.ಕಾ. ಸುಬ್ಬರಾಯಾಚಾರ್ಯರ 'ಕುಶಧ್ವಜ', ವಿದ್ಯಾ ಇಲಾಖೆಯ ಪ್ರಕಟನೆ 'ಮಕ್ಕಳ ನಾಟಕ', ವರದರಾಜ ಹುಯಿಲಗೋಳರ 'ದೀಪಾವಳಿ' 'ಇದು ಅಭ್ಯಾಸದ ಕೋಣೆ' ಹಾಗೂ 'ಸೀನು', 'ಪ್ರಭಾತ ಶಿಶುವಿಹಾರ'ದವರು ಮತ್ತು 'ಹಿಮಾಂಶು ಶಿಸುವಿಹಾರ'ದವರು ಆಡಿದ ನಾಟಕಗಳು, ವಾಮನ ಬೇಂದ್ರೆ ಅವರ 'ಸೊಂಡೀ ಗಣಪ್ಪಾ ಬಂದಾ', ಟಿ.ಎಂ.ಆರ್. ಸ್ವಾಮಿಯವರ 'ಪಾಯಸದ ಪಟ್ಟಣ' 'ಬೆಂಕಿಕೋಳಿ' ನಾಟಕಗಳು ನೆನಪಿಗೆ ಬರುವ ಮಕ್ಕಳ ನಾಟಕಗಳು. ಮಕ್ಕಳ ಸಾಹಿತ್ಯದ ಈ ಪ್ರಕಾರ ಇನ್ನೂ ಬಹಳ ಬಹಳ ಬೆಳೆಯಬೇಕು.

ಮಕ್ಕಳಲ್ಲಿ ಜ್ಞಾನದ ಹಸಿವನ್ನು ಹೆಚ್ಚಿಸುವ, ವೈಜ್ಞಾನಿಕ ದೃಷ್ಟಿಯನ್ನು ಮೂಡಿಸುವ, ವಿವೇಚನಾ ಶಕ್ತಿಯ ದಿಗಂತಗಳನ್ನು ವಿಸ್ತರಿಸುವ ಸಾಹಿತ್ಯದ ಮಹತ್ವವನ್ನು ಮರೆಯುವಂತಿಲ್ಲ. ಇತ್ತೀಚೆಗೆ ಕನ್ನಡದ ಮಕ್ಕಳಿಗಾಗಿ ಇಂಥ ಸಾಹಿತ್ಯವೂ ಬರುತ್ತಲಿರುವುದು ಸಂತೋಷದ ಸಂಗತಿ. ಭಾರತದ ಬೇರಾವ ಭಾಷೆಯಲ್ಲಿ ಬಾಲಕರಿಗಾಗಿಯೇ ವಿಶ್ವಕೋಶಗಳು ಬರುವ ಮೊದಲೇ ಕಾರಂತರ 'ಬಾಲ ಪ್ರಪಂಚ'ದ ಮೂರು ಸಂಪುಟಗಳನ್ನು ಪಡೆದ ಭಾಗ್ಯ ಕನ್ನಡ ಮಕ್ಕಳದು. ಅವರೇ ನೀಡಿದ 'ವಿಜ್ಞಾನ ಪ್ರಪಂಚ'ದ ನಾಲ್ಕು ಸಂಪುಟಗಳು, ನಿರಂಜನರ ಪ್ರಧಾನ ಸಂಪಾದಕತ್ವದಲ್ಲಿ ಹೊರಬಿದ್ದ 'ಜ್ಞಾನ ಗಂಗೋತ್ರಿ'ಯ ಏಳು ಸಂಪುಟಗಳು, ಐ.ಬಿ.ಎಚ್. ಪ್ರಕಾಶನದ 'ಇದು ನಮ್ಮ ಭಾರತ' ಮಾಲೆಯ ಪುಸ್ತಕಗಳು, ಇದೇ ಪ್ರಕಾಶನದ 'ಇಕೋ' ಪುಸ್ತಕ ಮಾಲೆಯ ಹಾಗೂ ನ್ಯಾಷನಲ್ ಬುಕ್ ಟ್ರಸ್ಟಿನ ನೆಹರೂ ಬಾಲ ಪುಸ್ತಕಾಲಯದ ವಿಜ್ಞಾನ ವಿಷಯಕ ಪ್ರಕಟನೆಗಳು, ಕನ್ನಡ ವಿಜ್ಞಾನ ಪರಿಷತ್ತಿನ ಪ್ರಕಟನೆಗಳು, ದಕ್ಷಿಣ ಭಾಷಾ ಪುಸ್ತಕ ಸಂಸ್ಥೆಯ ಕೆಲವು ಪ್ರಕಟನೆಗಳು, 'ಸಮಾಜ ಪುಸ್ತಕಾಲಯ'ದ ಕೆಲವು ಪ್ರಕಟನೆಗಳು, 'ಕನ್ನಡ ಸಾಹಿತ್ಯ ಪರಿಷತ್ತಿ'ನ ಕೆಲವು ಪುಸ್ತಿಕೆಗಳು, 'ಭಾರತ ಭಾರತಿ ಪುಸ್ತಕ ಸಂಪದ'ದ ಕೆಲವು ಹೊತ್ತಗೆಗಳು, ಈ ನಿಟ್ಟಿನಲ್ಲಿ ನಡೆದ ದಿಟ್ಟ ಪ್ರಯತ್ನಗಳು. 'ಅಮರ ಚಿತ್ರಕಥೆ' ಮಾಲೆಯನ್ನು ಹೇಗೆ ಮರೆಯುವುದು ?

ನಮ್ಮ ರಾಜ್ಯದ ಶಿಕ್ಷಣ ಇಲಾಖೆಯ ಸಂಶೋಧನ ಶಾಖೆಯು ಪ್ರಕಟಿಸಿರುವ 'ನನ್ನಮನೆ' ಮಾಲೆಯ ಇಪ್ಪತ್ತು ಹೊತ್ತಗೆಗಳು ಆಯಾ ಪ್ರದೇಶಗಳಲ್ಲಿದ್ದು ಬಂದ



ಇಪ್ಪತ್ತು ಕನ್ನಡ ಲೇಖಕರಿಂದ ರಚಿತವಾಗಿವೆಯಾಗಿ ಕನ್ನಡ ಮಕ್ಕಳಿಗೆ ತುಂಬ ಪ್ರಯೋಜನಕಾರಿಯಾಗಿವೆ. ದಕ್ಷಿಣ ಭಾಷಾ ಸಂಸ್ಥೆಯು ಪ್ರಕಟಿಸಿರುವ 'ನೀನೂ ವಿಜ್ಞಾನಿಯಾಗು' ಎಂಬ ಎರಡು ಹೊತ್ತಗೆಗಳು, ಬೊಂಬಾಯಿಯ ಸೋಮಯ್ಯ ಪಬ್ಲಿಕೇಷನ್ಸ್ ಅವರ 'ನಾಳೆಯ ನಾಗರಿಕರ ಪುಸ್ತಕಮಾಲೆ', ಕೆ. ನಂಜುಂಡಯ್ಯನವರ 'ಐವರು ಮಹಾ ವಿಜ್ಞಾನಿಗಳು', ಬಿ. ಎಸ್. ರುಕ್ಕಮ್ಮನವರ 'ಕೀಟಗಳ ಒಡನಾಡಿ ಫೇಬರ್', ಡಾ. ದೇ ಜವರೇಗೌಡರ 'ಆಲ್‌ಬರ್ಟ್ ಐನ್‌ಸ್ಟೀನ್', ಹರಿಚರಣ ಅವರ 'ಅಣುವಿಜ್ಞಾನಿಭಾಬಾ' ಪದ್ಮ ನಾಡಿಗರ 'ಗಡಿಯಾರದ ಕಥೆ' ಪರಮೇಶ್ವರ ಭಟ್ಟರ 'ಭೂಮಿ ಮತ್ತು ಧೂಮಕೇತು', ಎಂ.ಬಿ. ಇನಾಮದಾರರ 'ದೀಪಸಭೆ', ಎರೇಸೀಮೆಯವರ 'ಜೇನು', ಪ.ವಿ. ಚಂದ್ರಶೇಖರ ಅವರ 'ಇರುವೆಯ ಕಥೆ ; ಭಾರತೀಸುತರ 'ಸಿಗೋರ', ಜ.ನಾ. ಕಮಲಾಪುರ ಅವರ 'ಹಾರದ ಹಕ್ಕಿಗಳು ಮತ್ತು ಹಾರುವ ಹಕ್ಕಿಗಳು', ಭಾರತ ಸರಕಾರದ ಪ್ರಕಟನೆ 'ನಮ್ಮ ಹಕ್ಕಿಗಳು', ನರಸಿಂಹಯ್ಯಂಗಾರ್ ಅವರ 'ಇದು ಯಾವ ನಾಯಿ' ? ; 'ಇದು ಯಾವ ಮರ' ?, ಸೂ. ಸುಬ್ರಹ್ಮಣ್ಯಂ ಅವರ "ನಮ್ಮ ಸೂರ್ಯ, ರಕ್ತದ ಕಥೆ"ಗಳು, ಶಶಿಕುಮಾರ ಅವರ 'ಚಂದ್ರನ ಮೇಲೆ ಇಳಿದರು', ಮಾದೇವ ಮಿತ್ರರ 'ಮಂಗಳ ಲೋಕದ ಅಂಗಳಕೆ ; ಎಂ. ಎಸ್. ರಾಮರಾವ್ ಅವರ 'ಕಿಟ್ಟಿ ಬಿಟ್ಟಿ ಆಕಾಶಬುಟ್ಟಿ', ಎಸ್. ಹನುಮಂತರಾಯರ 'ಪ್ರೇಮಯಾನ', ರವಿ ಅವರ 'ನಮ್ಮ ಆದಿ ಮಾನವರು', ವೆಂಕೋಬಾಚಾರ್ಯರ 'ವಿಜ್ಞಾನದ ಕಥೆಗಳು, ಎಲ್. ಎಸ್. ಶೇಷಗಿರಿರಾಯರ 'ಬೆಳಕಿನ ದೂತರು'–ಇನ್ನೂ ಅನೇಕ ಕೃತಿಗಳು' ನಮ್ಮ ನಾಡಿನ ಮಕ್ಕಳಿಗಾಗಿ ಎಂಥ ಜ್ಞಾನ–ವಿಜ್ಞಾನದಾಯಕ ಸಾಹಿತ್ಯ ಬರುತ್ತಿದೆಯೆಂಬುದಕ್ಕೆ ನಿದರ್ಶನವಾಗಿವೆ.

ಆದರೆ ಈಗ ಬಂದಿರುವುದು ಬರಬೇಕಾಗಿರುವುದರ ಅತ್ಯಲ್ಪಭಾಗ ಮಾತ್ರ. ನಿತ್ಯ ನಾಗಾಲೋಟದಿಂದ ಓಡುತ್ತಲಿರುವ ಜ್ಞಾನ–ವಿಜ್ಞಾನ ಪ್ರಪಂಚದಲ್ಲಿ 'ಇಲ್ಲಿಗೆ ಎಲ್ಲ ಬಂದಿತು, ಎಲ್ಲ ಮುಗಿಯಿತು' ಎಂದು ಯಾರು ಹೇಳಿಯಾರು ? ನಿರಂತರ ವಿಸ್ತಾರಗೊಳ್ಳುತ್ತ ಹೋಗುವ ಕ್ಷಿತಿಜಗಳುಳ್ಳ ಈ ಪ್ರಪಂಚ ಯಾವ ಒಂದು ಭಾಷೆಯ ಬರವಣಿಗೆಗೂ ಇಡಿಯಾಗಿ ಎಟುಕದಂಥ ಪ್ರಪಂಚ. ಆದರೂ ಅದನ್ನು ಹಿಡಿವ ಸಾಹಸವನ್ನು ಬಿಡದಿರುವುದರಲ್ಲಿಯೇ ಭಾಷೆ, ಭಾಷೆಯೊಡನೆ ಸಾಹಿತ್ಯ ಬೆಳೆಯುತ್ತವೆ. ಅವುಗಳೊಡನೆ ಮಾನವ ಜೀವನದ ಸಮೃದ್ಧಿ ಸಾರ್ಥಕತೆಗಳು ಬೆಳೆಯುತ್ತವೆ. ಆ ಪ್ರಮಾಣದಲ್ಲಿ ಮಕ್ಕಳ ಭಾವ ಜೀವನ, ಬುದ್ಧಿ ಜೀವನಗಳು ಬೆಳೆಯುತ್ತವೆ. ಈ ದೃಷ್ಟಿಯಿಂದ ನೋಡಿದಾಗ ಮಕ್ಕಳ ಸಾಹಿತ್ಯ ನಿರ್ಮಾಣ ರಾಷ್ಟ್ರನಿರ್ಮಾಣ ಕಾರ್ಯದ ಬಹು ಮಹತ್ವದ ಅಂಗವಾಗುತ್ತದೆ. ಕನ್ನಡ ನಾಡಿನ ಮಕ್ಕಳು ಭಾರತಕ್ಕೇ ಬೆಳಕಾಗುವಂತೆ ಬೆಳೆಯಬೇಕೆಂದು ಬಯಸುವವರೆಲ್ಲರೂ ಕನ್ನಡದಲ್ಲಿ ಅತ್ಯುನ್ನತ ಮಟ್ಟದ ಪ್ರಬೋಧ–ಪ್ರಮೋದ ಮಿಶ್ರಿತ, ಮಾಧುರ್ಯ–ಪ್ರಕಾಶಪೂರಿತ ಮಕ್ಕಳ ಸಾಹಿತ್ಯದ

ಸಂವರ್ಧನೆಗೆ ಸಿದ್ಧರಾಗಲೇಬೇಕು. ಮಕ್ಕಳ ಸಾಹಿತ್ಯದ ಬಗ್ಗೆ ಇದುವರೆಗಿನ ಉದಾಸೀನಭಾವ, ಅನಾಸಕ್ತ ಪ್ರವೃತ್ತಿ, ಅವಜ್ಞೆಗಳು ಹೋಗಿ ಮಕ್ಕಳ ಸಾಹಿತ್ಯದ ಮಹತ್ವವನ್ನು ಸರಕಾರ–ಸಮಾಜಗಳು ಮನಗಾಣಬೇಕು ; ಅದರ ಬೆಳವಿಗೆಗಾಗಿ ಮುಂದೆ ಬರಬೇಕು.

ಮಕ್ಕಳ ಸಾಹಿತ್ಯವನ್ನು ಮಕ್ಕಳ ಚಾರಿತ್ರ್ಯ ನಿರ್ಮಾಣದ, ಸದಭಿರುಚಿ ಸೃಷ್ಟಿಯ, ಸದಸದ್ವಿವೇಕ ವಿಕಸನದ ಸಾಧನವನ್ನಾಗಿ ಮಾಡಿಕೊಳ್ಳುವುದು ಸಾಧ್ಯವಿದೆ. ಇದರ ಜೊತೆ ಜೊತೆಗೆ ಮಕ್ಕಳಲ್ಲಿ ಕರುಣೆ, ಸಹನಶೀಲತೆ, ಸಾಹಸ, ಸ್ನೇಹಪರತೆ, ಸಹಕಾರ ಪೂರ್ಣತೆ, ಜನತಾಂತ್ರಿಕ ಮೌಲ್ಯಪರಾಯಣತೆ, ರಾಷ್ಟ್ರದ ಅಖಂಡತೆ, ಅಭಿವೃದ್ಧಿ ಶೀಲತೆ, ನಿರ್ಣಯ ಕ್ಷಮತ್ವ, ಪ್ರಸಂಗಾವಧಾನ, ಸಮಷ್ಟಿಪ್ರಜ್ಞೆ, ಸತ್ಯಪ್ರಿಯತೆ, ಕರ್ತವ್ಯ ನಿಷ್ಠೆ, ಪರಸ್ಪರ ಪ್ರೀತಿ-ವಿಶ್ವಾಸ ಆದರಗಳು, ವಿಶ್ವ ಕುಟುಂಬಿತ್ವ, ವೈಜ್ಞಾನಿಕ ದೃಷ್ಟಿಕೋಣ, ವಸ್ತುನಿಷ್ಠ ಪ್ರವೃತ್ತಿ, ವೈಚಾರಿಕ ಮನೋಧರ್ಮ, ತಮ್ಮ ಸಾಂಸ್ಕೃತಿಕ ಪರಂಪರೆಯ ಸಮುಚಿತ ಪರಿಜ್ಞಾನ, ಪ್ರಾಚೀನ ಪರಂಪರೆಯನ್ನೂ ಪೂರ್ವದ ಮೌಲ್ಯಗಳನ್ನೂ ಪುನರ್‌ವಿಮರ್ಶಿಸಿ ಪರಿಷ್ಕರಿಸಿಕೊಳ್ಳಬಲ್ಲ ಯೋಗ್ಯತೆ, ಸಾಮಾಜಿಕ ನ್ಯಾಯ, ಸಮತೆ ಇತ್ಯಾದಿಗಳನ್ನು ಬಿತ್ತಿ ಬೆಳೆಸಲೂ, ಶಿಕ್ಷಣದ ಮೂಲ ಗುರಿಯಾದ ಜೀವನದ ಗುಣವತ್ತತೆಯನ್ನು ಗಳಿಸಲೂ ಸಬಲ ಸಾಧನವಾಗುವಂತೆ ಮಕ್ಕಳ ಸಾಹಿತ್ಯ ರಚಿತವಾಗುವುದು ಸಾಧ್ಯವಿದೆ, ಸಾಧಿತವಾಗಬೇಕಿದೆ. ಮಕ್ಕಳ ಕುತೂಹಲವನ್ನು ಕೆರಳಿಸುತ್ತ, ಅವರ ಅರಿವನ್ನು ಅರಳಿಸುತ್ತ, ಅವರ ಕಾಣ್ಕೆಯ ಕ್ಷಿತಿಜಗಳನ್ನು ವಿಸ್ತರಿಸುತ್ತ, ಅವರ ಸಮನ್ವಿತ ವ್ಯಕ್ತಿತ್ವವನ್ನು ರೂಪಿಸುತ್ತ, ಭೂತ ವರ್ತಮಾನಗಳ ಅರ್ಥಪೂರ್ಣ ಗ್ರಹಿಕೆಯಿಂದ ಭವಿಷ್ಯದ ರೂವಾರಿಗಳಾಗುವಂತೆ ಅವರನ್ನು ಪ್ರೇರಿಸುತ್ತ, ಮುಂಬರುವ ಸವಾಲುಗಳನ್ನು ಸ್ವೀಕರಿಸಲು ಅವರಲ್ಲಿ ಸ್ಥೈರ್ಯ ಧೈರ್ಯಗಳನ್ನು ತುಂಬುತ್ತ, ಅವರ ವಾಚನಾಭಿರುಚಿ ಹಂತಹಂತವಾಗಿ ಗಂಭೀರ ಸಾಹಿತ್ಯಕ್ಕೆ ಸಹಜವಾಗಿ ತಿರುಗುವಂತೆ ಅದನ್ನು ಕುಶಲತೆಯೊಡನೆ ಕುಸುರಿಸುತ್ತ ಸಾಗುವ ಮಕ್ಕಳ ಸಾಹಿತ್ಯ ಬಂಗಾರ ಬೆಳೆಯಾಗಿ ಬರಬೇಕಿನ್ನು. ಇಂಥ ಸಾಹಿತ್ಯವೇ ಮಕ್ಕಳಿಗಾಗಿ ನಾವು ನೀಡಬಹುದಾದ ಅಮೂಲ್ಯ ಆಸ್ತಿ.

ಇಂಥ ಸಾಹಿತ್ಯದ ನಿರ್ಮಾಣಕ್ಕಾಗಿ ಚೈತನ್ಯದಾಯಕ ಪರಿಸರವನ್ನು, ಸೂಕ್ತ ಪ್ರೋತ್ಸಾಹ ಪ್ರೇರಣೆಗಳನ್ನು, ಮನ್ನಣೆ ಸಂಭಾವನೆಗಳ ನಿರ್ದುಷ್ಟ ನಿರ್ದಿಷ್ಟ ವಿಧಿ ವಿಧಾನಗಳನ್ನು, ಪ್ರಕಾಶನ ಸೌಕರ್ಯಗಳನ್ನು ಹುಟ್ಟು ಹಾಕುವುವರ ಜೊತೆಗೆ ಕಳೆದ ಒಂದೂವರೆ ಶತಮಾನಗಳಲ್ಲಿ ಕನ್ನಡದಲ್ಲಿ ರಚಿತವಾಗಿರುವ ಮಕ್ಕಳ ಸಾಹಿತ್ಯದ ಮಥನ ಮಾಡಿ ಅದರ ಅತ್ಯುತ್ತಮ ಭಾಗಗಳನ್ನು ಸುಲಭ ಬೆಲೆಯ ಸಂಪುಟಗಳಲ್ಲಿ ಕನ್ನಡ ಮಕ್ಕಳಿಗೆ ಒದಗಿಸಬೇಕು. ಮಕ್ಕಳ ಕತೆಗಳ ಸಂಪುಟಗಳು ನಾಲ್ಕು, ಮಕ್ಕಳ ಕವಿತೆಗಳ ಸಂಪುಟಗಳು ನಾಲ್ಕು, ಮಕ್ಕಳ ನಾಟಕಗಳ ಸಂಪುಟ ಒಂದು,



ಸಂಕೀರ್ಣ ಸಂಪುಟ ಒಂದು, ಹೀಗೆ ಹತ್ತು ಸಂಪುಟಗಳಲ್ಲಿ ಇಂದಿನವರೆಗಿನ ಮಕ್ಕಳ ಸಾಹಿತ್ಯದ ಸಾರಸಂಗ್ರಹವನ್ನು ನಮ್ಮ ಸರಕಾರ ಈ ನಾಡಿನ ಎಲ್ಲ ಪ್ರಾಥಮಿಕ ಶಾಲೆಗಳಿಗೂ ಉಚಿತವಾಗಿ ಒದಗಿಸಬೇಕು. ಈ ಹಿಂದೆ ರಾಷ್ಟ್ರಕವಿ ಕುವೆಂಪು ಅವರ ಅಧ್ಯಕ್ಷತೆಯಲ್ಲಿ ಆಯ್ಕೆಗೊಂಡು ಪ್ರಕಟವಾದ 'ಹಿಗ್ಗಿನ ಬುಗ್ಗೆ' ಎಂಬ ಹಾಡುಗಳ ಸಂಕಲನ ಈ ದಿಕ್ಕಿನಲ್ಲಿ ದಾರಿದೀಪವಾಗಬಲ್ಲುದು. ಮಕ್ಕಳಿಗೆ ಪುಕ್ಕಟೆಯಾಗಿ ಪಠ್ಯಪುಸ್ತಕಗಳನ್ನು ಪೂರೈಸುತ್ತಿರುವ ನಮ್ಮ ಸರಕಾರ ಪ್ರಾಥಮಿಕ ಶಾಲೆಗಳಿಗೆ ಈ ಹತ್ತು ಸಂಪುಟಗಳನ್ನು ಉಚಿತವಾಗಿ ಒದಗಿಸಲು ಹಿಂದೆಗೆಯಲಾರದು, ಹಿಂದೆಗೆಯಬಾರದು.

ರಾಷ್ಟ್ರೀಯ ಶೈಕ್ಷಣಿಕ ಅನುಸಂಧಾನ ಹಾಗೂ ಪ್ರಶಿಕ್ಷಣ ಪರಿಷತ್ತು ಇದುವರೆಗೆ ಹದಿನೇಳು ಭಾಷೆಗಳಲ್ಲಿ 24 ಬಾಲಸಾಹಿತ್ಯ ಪುರಸ್ಕಾರ ಸ್ಪರ್ಧೆಗಳನ್ನು ಏರ್ಪಡಿಸಿದೆ. ಇದರಿಂದ ಪ್ರತಿವರ್ಷ 36 ಬಾಲಸಾಹಿತ್ಯ ಕೃತಿಗಳಿಗೆ ಪುರಸ್ಕಾರಗಳು ಪ್ರಾಪ್ತವಾಗಿವೆ. ಈವರೆಗೆ ಒಟ್ಟು ಎಂಟು ನೂರು ಕೃತಿಗಳಿಗೆ ಪುರಸ್ಕಾರ ಬಂದಿರಲು ಸಾಕು. ಇದಲ್ಲದೆ ನಮ್ಮ ರಾಜ್ಯ ಸಾಹಿತ್ಯ ಅಕಾಡೆಮಿ, ಕನ್ನಡ ಸಾಹಿತ್ಯ ಸಂವರ್ಧಕ ಟ್ರಸ್ಟ್, ಬೇರೆ ರಾಜ್ಯಗಳ ಸಾಹಿತ್ಯ ಅಕಾಡೆಮಿಗಳು ಬಾಲಸಾಹಿತ್ಯದ ಉತ್ತಮ ಕೃತಿಗಳಿಗೆ ಪುರಸ್ಕಾರವನ್ನೀಯುತ್ತಿವೆ. ಇವೆಲ್ಲವನ್ನೂ ಗಣನೆಗೆ ತೆಗೆದುಕೊಂಡರೆ ಒಂದು ಸಾವಿರ ಉತ್ಕೃಷ್ಟ ಕೃತಿಗಳ ಭಂಡಾರವೇ ಸಿದ್ಧವಾಗುವುದು. ಇವೆಲ್ಲವನ್ನೂ ಒರೆದು ನೋಡಿ, ಕನ್ನಡ ನಾಡಿನ ಮಕ್ಕಳಿಗೆ ದೊರೆಯಲೇ ಬೇಕೆಂದೆನಿಸುವ ಒಂದೆರಡು ನೂರು ಕೃತಿಗಳನ್ನಾಯ್ದು, ಅವುಗಳಿಗೆ ಕನ್ನಡ ಮಾತಿನ ಮೈಕೊಟ್ಟು ನಮ್ಮ ಮಕ್ಕಳಿಗೆ ಒದಗಿಸುವಂಥ ಯೋಜನೆಯನ್ನೂ ನಮ್ಮ ಸರಕಾರವಾಗಲಿ, ಕನ್ನಡ ಸಾಹಿತ್ಯ ಪರಿಷತ್ತಾಗಲಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯಾಗಲಿ, ನಮ್ಮ ಮಕ್ಕಳ ಸಾಹಿತ್ಯ ಅಕಾಡೆಮಿಯಾಗಲಿ, ಇಲ್ಲವೆ ಸಂಯುಕ್ತವಾಗಿಯಾಗಲಿ ಕೈಗೆತ್ತಿಕೊಳ್ಳಬೇಕು. ಇದರಿಂದ ನಮ್ಮ ಮಕ್ಕಳಿಗೆ ಒಳ್ಳೆಯ ಸಾಹಿತ್ಯ ದೊರೆಯುವುದರ ಜೊತೆಗೆ ಭಾರತದ ಏಕತೆಯ ಅರಿವೂ ಉಂಟಾಗುವುದು.

ಮಕ್ಕಳ ಪುಸ್ತಕಗಳಿಗೆ ಬೇಕಾಗುವ ಚಿತ್ರಗಳೇ ವಿಶಿಷ್ಟ ರೀತಿಯವು. ಯಾವ ಯಾವ ವಯಸ್ಸಿನ ಮಕ್ಕಳಿಗೆ ಎಂಥ ಚಿತ್ರಗಳು ಸೇರುತ್ತವೆ. ಎಂಥ ರೇಖಾ ವಿನ್ಯಾಸ ಇಷ್ಟವಾಗುತ್ತದೆ, ಎಂಥ ಬಣ್ಣಗಳು ರಂಜಿಸುತ್ತವೆ ಇತ್ಯಾದಿ ವಿಷಯಗಳು ವಿಶೇಷಜ್ಞರು ನಿರ್ಣಯಿಸಬೇಕಾದ ಅಂಶಗಳು. "ನಾನು ಎಲ್ಲವನ್ನೂ ಬಲ್ಲೆ" ನೆಂಬ ಹಮ್ಮಿನಿಂದ ಕತೆ, ಚಿತ್ರ, ಗಾತ್ರ, ಮುದ್ರಣ ವಿನ್ಯಾಸ–ಎಲ್ಲವನ್ನೂ ಒಬ್ಬನೇ ಮಾಡಿ ನೀಡುವ ಏಕವ್ಯಕ್ತಿ ಸಾಹಸಗಳಿಗಿಂತ ಒಳ್ಳೆಯ ಮಕ್ಕಳ ಸಾಹಿತಿಗಳು, ಒಳ್ಳೆಯ ಮಕ್ಕಳ ಚಿತ್ರಗಾರರು, ಒಳ್ಳೆಯ ಮುದ್ರಣ ಕಲಾವಿದರು ಸೇರಿ ಸಲ್ಲಿಸುವ ಮಕ್ಕಳ ಸಾಹಿತ್ಯ ಕೃತಿಗಳು ಹೆಚ್ಚು ಪರಿಣಾಮಕಾರಿಗಳಾಗಬಲ್ಲುವು. ಆದುದರಿಂದ ಮಕ್ಕಳ ಸಾಹಿತ್ಯಕ್ಕಾಗಿ

ಚಿತ್ರ ಬರೆಯಲೆಂದೇ ತಮ್ಮ ಕಲೆಯನ್ನು ಮುಡುಪಿಡಲು ಮುಂದೆ ಬರುವ ಕೆಲವರನ್ನು ವಿಶೇಷ ಪರಿಣತಿಗಾಗಿ ಸೂಕ್ತ ಚಿತ್ರಕಲಾಕೇಂದ್ರಗಳಿಗೆ ಕಳಿಸುವ, ಅವರ ಪರಿಣತಿಯ ಫಲಗಳನ್ನು ತಕ್ಕ ಪ್ರಮಾಣದಲ್ಲಿ ಪಡೆದು ಯಾವ ದೇಶದ ಮಕ್ಕಳ ಪುಸ್ತಕಗಳಿಗೆ ಹೋಲಿಸಿದರೂ ಕಡಮೆಯೆನ್ನಿಸದ ಮಕ್ಕಳ ಸಾಹಿತ್ಯ ಕೃತಿಗಳನ್ನು ಪ್ರಕಟಿಸುವ ಯೋಜನೆಯೊಂದು ಕಾರ್ಯಾನ್ವಿತವಾಗಬೇಕು.

1960 ರಲ್ಲಿ ಕೇಂದ್ರ ಸರಕಾರ ಹಾಗೂ ಕರ್ನಾಟಕ ರಾಜ್ಯ ಸರಕಾರಗಳ ಸಂಯುಕ್ತ ಆಶ್ರಯದಲ್ಲಿ ಮಕ್ಕಳ ಸಾಹಿತ್ಯ ರಚನಾಲಯವೊ ದು ಯಶಸ್ವಿಯಾಗಿ ನಡೆಯಿತು. ಆಗ ಈ ಕ್ಷೇತ್ರದಲ್ಲಿ ಹೆಸರು ಗಳಿಸಿದ್ದ ಮಕ್ಕಳ ಸಾಹಿತಿಗಳೆಲ್ಲರೂ ಅದರಲ್ಲಿ ಪಾಲುಗೊಂಡಿದ್ದರು. ಆಗ ಶಿಕ್ಷಣ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ನಾನೂ ಅದರಲ್ಲಿ ಭಾಗವಹಿಸಿದ್ದೆ. ಮಕ್ಕಳ ಸಾಹಿತ್ಯದ ಸರ್ವಾಂಕಷವಾದ ಅಧ್ಯಯನ ಅಲ್ಲಿ ನಡೆಯಿತು. ಅದರ ವಿವಿಧಾಂಗಗಳನ್ನು ಕುರಿತು ತಜ್ಞರು ಉಪನ್ಯಾಸಗಳನ್ನಿತ್ತರು. ಆ ರಚನಾಲಯ ಮುಕ್ತಾಯವಾಗುವಷ್ಟರಲ್ಲಿ ಅದರಲ್ಲಿ ಭಾಗವಹಿಸಿದ್ದವರೆಲ್ಲರೂ ಮಕ್ಕಳಿಗಾಗಿ ಒಂದು ಕತೆಯನ್ನೋ, ಕವಿತೆಯನ್ನೋ, ನಾಟಕವನ್ನೋ ರಚಿಸಲೇ ಬೇಕೆಂಬ ನಿರ್ಬಂಧವಿದ್ದಿತು. ಆ ಪ್ರಕಾರ ಅವರೆಲ್ಲರೂ ತುಂಬ ಒಳ್ಳೆಯ ಕತೆ, ಕವಿತೆ, ನಾಟಕಗಳನ್ನು ರಚಿಸಿಕೊಟ್ಟರು. 'ಮಕ್ಕಳ ಮುತ್ತು' ಎಂಬ ಸಂಗ್ರಾಹ್ಯ ಸಂಕಲನ ಹೊರಬಿದ್ದಿತು, ಮಕ್ಕಳ ಮನಗಳನ್ನು ಗದ್ದಿತು. 1962 ರಲ್ಲಿ ಮತ್ತೊಮ್ಮೆ ಈ ರಚನಾಲಯ ಸೇರಿ ಮತ್ತೆ ಕೆಲವು ಮಕ್ಕಳ ಸಾಹಿತ್ಯ ಕೃತಿಗಳು ಪ್ರಕಟವಾದುವು. ಇಂಥ ಮಕ್ಕಳ ಸಾಹಿತ್ಯ ರಚನಾಲಯಗಳನ್ನು ನಮ್ಮ ಸರಕಾರ ಮೂರು ವರ್ಷಗಳಿಗೊಮ್ಮೆಯಾದರೂ ತಪ್ಪದೆ ಸಂಘಟಿಸಬೇಕು. ಇದೇ ವರ್ಷ, ತಪ್ಪಿದರೆ ಮುಂದಿನ ಶೈಕ್ಷಣಿಕ ವರ್ಷದಲ್ಲಿ ನಮ್ಮ ನಾಡಿನ ಎಲ್ಲ ಭಾಗಗಳ ಪ್ರಮುಖ ಮಕ್ಕಳ ಸಾಹಿತಿಗಳನ್ನೊಳಗೊಂಡ ಮಕ್ಕಳ ಸಾಹಿತ್ಯ ರಚನಾಲಯವೊಂದನ್ನು ಫಲಪ್ರದವಾಗುವ ರೀತಿಯಲ್ಲಿ ನಡಸಬೇಕು.

ವಿಶ್ವ ಕನ್ನಡ ಮೇಳದ ಅಂಗವಾಗಿ ಜಿಲ್ಲೆಗೊಂದು ಕನ್ನಡ ಭವನ ನಿರ್ಮಾಣಗೊಳ್ಳಲಿದೆಯಷ್ಟೆ ? ಅದರಲ್ಲಿಯೇ ಮಕ್ಕಳ ಸಾಹಿತ್ಯ ವಿಭಾಗಗಳನ್ನೊಳಗೊಂಡ ಜಿಲ್ಲಾ ಕೇಂದ್ರ ಗ್ರಂಥಾಲಯವೂ ಸ್ಥಳ ಪಡೆದು, ಕನಿಷ್ಠ ಜಿಲ್ಲೆಯ ಮಟ್ಟದಲ್ಲಾದರೂ ಈಗ ಉಪಲಬ್ಧವಿರುವ ಎಲ್ಲ ಒಳ್ಳೆಯ ಮಕ್ಕಳ ಪುಸ್ತಕಗಳು ಅಲ್ಲಿ ಲಭ್ಯವಾಗುವಂತೆ ನಮ್ಮ ಸರಕಾರ ಕ್ರಮ ಕೈಗೊಳ್ಳಬೇಕು. ಕ್ರಮೇಣ ಎಲ್ಲ ತಾಲ್ಲೂಕು ಕೇಂದ್ರಗಳಲ್ಲಿಯೂ ಮಕ್ಕಳ ಸಾಹಿತ್ಯ ಸದನಗಳನ್ನು ತೆರೆಯಬೇಕು. ಜಿಲ್ಲಾ ಕೇಂದ್ರಗಳಲ್ಲಿ ಗ್ರಂಥಾಲಯದ ಜೊತೆಗೆ ಮಕ್ಕಳ ವಿಭಾಗವನ್ನೂ ಒಳಗೊಂಡ ವಸ್ತು ಸಂಗ್ರಹಾಲಯಗಳನ್ನೂ ಪ್ರಾರಂಭಿಸಬೇಕು; ಬಯಲು ರಂಗಮಂಟಪಗಳನ್ನೂ ಜೋಡಿಸಬೇಕು. ಜಿಲ್ಲೆಗಳಿಗಾಗಿ ಇರುವ ಎಲ್ಲ ಶೈಕ್ಷಣಿಕ, ಸಾಹಿತ್ಯಕ, ಸಾಂಸ್ಕೃತಿಕ ಯೋಜನೆಗಳೂ ಒಂದೇ ಕೇಂದ್ರ



ಭವನದಲ್ಲಿ ಸಮಾವೇಶಗೊಳ್ಳುವುದು ಉಳಿತಾಯದ ದೃಷ್ಟಿಯಿಂದಲೂ ಒಳ್ಳೆಯದು, ಉಪಯೋಗದ ದೃಷ್ಟಿಯಿಂದಲೂ ಒಳ್ಳೆಯದು.

ಸಿ. ಅಶ್ವತ್ಥನಾರಾಯಣರಾಯರು ಸಂಪಾದಿಸಿ ಪ್ರಕಟಿಸುತ್ತಿದ್ದ 'ಮಕ್ಕಳ ಪುಸ್ತಕ', ದೇವುಡು ಅವರ 'ನಮ್ಮ ಪುಸ್ತಕ', ಅಖಿಲ ಕರ್ನಾಟಕ ಮಕ್ಕಳ ಕೂಟದ ಪ್ರಕಟಣೆಯಾಗಿದ್ದ 'ಮಕ್ಕಳ ಬಾವುಟ' ಕುಮಾರ ವೆಂಕಣ್ಣನವರ 'ಪಾಪಚ್ಚಿ' ಇವುಗಳು ಕನ್ನಡದಲ್ಲಿ ಮಕ್ಕಳ ಸಾಹಿತ್ಯದ ಸೃಷ್ಟಿಗಾಗಿ ಸಲ್ಲಿಸಿರುವ ಸೇವೆ ಸ್ಮರಣೀಯ. ಆದರೆ ಇವೆಲ್ಲ ಈಗ ನಿಂತು ಹೋಗಿರುವುದು ವಿಷಾದನೀಯ. ಇವುಗಳಲ್ಲದೆ ಸನ್ಮಾರ್ಗದರ್ಶಿನಿ, ಕನಕ, ಕಂದ, ತುತ್ತೂರಿ, ಪರಿಮಳ, ಚಕ್ಕುಲಿಮಾಮ, ಮಗು, ಬಾಲಚಂದ್ರ, ಬಾಲಬಂಧು, ವಿಶ್ವಮಿತ್ರ, ಕಿಶೋರವಾಣಿ ಮೊದಲಾದ ಮಕ್ಕಳ ಮಾಸಪತ್ರಿಕೆಗಳೂ ನಿಂತುಹೋಗಿರುವುದು ಶೋಚನೀಯ. ಶ್ರೀ 'ಸಿಸು' ಸಂಗಮೇಶ ಮತ್ತು ಅವರ ಸಂಗಡಿಗರ ಸಾಹಸದ ಫಲವಾಗಿ ಬೆಳಕು ಕಂಡ 'ಬಾಲ ಭಾರತಿ'ಯೂ ಈಗ ನಿಂತು ಹೋದಂತಿದೆ. ಇದೊಂದು ಮಕ್ಕಳ ಮಾಸ ಪತ್ರಿಕೆಯಾದರೂ ಅಂತರ್ಬಾಹ್ಯ ಸೌಂದರ್ಯದೊಡನೆ ಅವಿಚ್ಛಿನ್ನವಾಗಿ ಪ್ರಕಟವಾಗಬೇಕು. ಅದರ ಒಂದೊಂದು ಸಂಚಿಕೆಯೂ ಒಂದೊಂದು ಮಕ್ಕಳ ಪುಸ್ತಕವೂ ಆಗುವಂತೆ ಮಾಡಿದರೆ ಇನ್ನೂ ಲೇಸು. ಚಂದಾದಾರರ ಮನೆಗಳಲ್ಲಿ ಒಂದೊಂದು ಪುಟ್ಟ ಮಕ್ಕಳ ಸಾಹಿತ್ಯ ಭಂಡಾರ ಪ್ರಾರಂಭವಾಗುವುದು. ಒಂದು ಸಂಚಿಕೆ ಮಕ್ಕಳ ಪದ್ಯಗಳ ಸಂಗ್ರಹವಾಗಿ ಪ್ರಕಟವಾದರೆ ಇನ್ನೊಂದು ಕತೆಗಳ ಸಂಗ್ರಹವಾಗಬಹುದು, ಮಗುದೊಂದು ನಾಟಕಗಳ ಸಂಗ್ರಹವಾಗಬಹುದು. ಹೀಗೆ ಇದೊಂದು ವಿನೂತನ ಪ್ರಯೋಗವಾಗಬಹುದು. ಪ್ರೊ. ವಿ. ಕೃಷ್ಣಶೆಟ್ಟಿಯವರ ವ್ಯವಸ್ಥಾಪಕ ಸಂಪಾದಕತ್ವದಲ್ಲಿ 'ಕಾರಂಜಿ' ಎಂಬ ಮೇಲ್ಮಟ್ಟದ ಮಕ್ಕಳ ಮಾಸಪತ್ರಿಕೆ ಪ್ರಕಟವಾಗುತ್ತಿರುವುದು ಸಂತೋಷದ ಸಂಗತಿ.

ಮಕ್ಕಳ ಸಾಹಿತ್ಯದ ಹುಚ್ಚು ಹಚ್ಚಿಕೊಂಡು, ಅದಕ್ಕಾಗಿ ದುಡಿದು ದುಡಿದು ಹಣ್ಣಾದ, ಸಣ್ಣಾದ ಬಿ. ಶ್ರೀ. ಪಾಂಡುರಂಗರಾಯರಂಥವರು ಹಲವರು ವಿಪನ್ನಾವಸ್ಥೆಯಲ್ಲಿದ್ದಾರೆ. ಅವರಿಗೆ ಸರಕಾರ ಮಾಸಾಶನಗಳನ್ನು ಮಂಜೂರು ಮಾಡುವುದಲ್ಲದೆ ಅವರ ಅಪ್ರಕಟಿತ ಕೃತಿಗಳೇನಾದರೂ ಇದ್ದರೆ ಅವುಗಳ ಪ್ರಕಟನೆಯ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕು.

ಹೀಗೆಯೇ ಸಲಹೆಗಳ ಸುರುಳಿ ಬಿಚ್ಚುತ್ತ ಹೋದರೆ ಹನುಮನ ಬಾಲ ಬಿಚ್ಚಿದಂತಾದೀತು. ಇದಕ್ಕೂ ಒಳ್ಳೆಯ ಸಲಹೆಗಳು ಬಲ್ಲವರಿಂದ ಬಂದಾವು.. ಈಗ ಮುಖ್ಯವಾಗಿ ಬೇಕಾಗಿರುವುದು ಬಂದ ಸಲಹೆಗಳಲ್ಲಿ ಒಂದೆರಡನ್ನಾದರೂ ಕೈಗೆತ್ತಿಕೊಂಡು, ಪಟ್ಟುಹಿಡಿದು ಕೃತಿರೂಪಕ್ಕಿಳಿಸುವ ಕ್ರತುಶಕ್ತಿಯುಳ್ಳವರ ಬಳಗ. ಇಂಥದೊಂದು ಬಳಗ ಬೆಳೆಯಬೇಕಾದರೆ ಮಕ್ಕಳ ಸಾಹಿತ್ಯವಿರುವುದು ಕೇವಲ ಮಕ್ಕಳಿಗಾಗಿ

ಮಾತ್ರವಲ್ಲ....ಹಿರಿಯರೂ ಅದನ್ನು ಓದಿ ಸ್ವಲ್ಪ ಕಾಲ ನಾವು ವಯಸ್ಕರೆಂಬುದನ್ನು ಮರೆತು ಮಗುವಿನ ಮುಗ್ಧ, ಸ್ನಿಗ್ಧ ಶುದ್ಧ ಮನವನ್ನು ಅನುಭವಿಸಬಹುದು ಎಂಬುದನ್ನು ಅರಿತಾಗ. ಮಕ್ಕಳಿಗೆಂದು ತರಿಸುವ ಪತ್ರಿಕೆಗಳನ್ನು ಮಕ್ಕಳಿಗಿಂತ ಮೊದಲೇ ಹಿರಿಯರು ಓದುವುದು ಈ ಕಾರಣಕ್ಕಾಗಿ. ಬಾಲ್ಯದ ಅಮೂಲ್ಯ ನಿಧಿಯಾದ ಬೆರಗು, ಕುತೂಹಲ, ಲವಲವಿಕೆ, ಅಕಲಂಕ ಅಕ್ಕರತೆ, ಅಕೃತ್ರಿಮ ಆನಂದಮಯತೆಗಳ ಅಲ್ಪಾಂಶವನ್ನಾದರೂ ವಯಸ್ಕರು ಉಳಿಸಿಕೊಳ್ಳದಿದ್ದರೆ ಬದುಕಿನಿಂದ ಪಡೆಯ ಬಹುದಾದ ಹಿಗ್ಗಿನ ಸುಗ್ಗಿಯ ಬಹುಭಾಗದಿಂದ ಅವರು ವಂಚಿತರಾಗುತ್ತಾರೆ.

ಇದು ಎಲ್ಲರಿಗೂ ಸಾಮಾನ್ಯವಾಗಿ ಅನ್ವಯಿಸುವ ಮಾತಾದರೂ ಮಕ್ಕಳ ಸಾಹಿತ್ಯ ರಚನೆಗೆ ಮನಸ್ಸು ಮಾಡುವವರಿಗೆ ಇದು ವಿಶೇಷವಾಗಿ ಅನ್ವಯಿಸುತ್ತದೆ. ಮಗುವಿನ ಮತ್ತು ತಮ್ಮ ವಯಸ್ಸಿನಲ್ಲಿರುವ ಅಂತರವನ್ನು ಮರೆತು ಮಗುವಿನೊಡನೆ ಮಗುವಾಗಬಲ್ಲವರು ಮಾತ್ರ ಸಾಹಿತ್ಯ ನಿರ್ಮಿಸಬಲ್ಲರು. ಇದನ್ನು ಸಾಧಿಸಿದ ವೃದ್ಧರೂ ಸಮೃದ್ಧವಾದ ಮಕ್ಕಳ ಸಾಹಿತ್ಯ ಸೃಜಿಸಬಲ್ಲರು; ಇದನ್ನು ಸಾಧಿಸದ ಎಳೆವರೆಯದವರೂ ಇದರಲ್ಲಿ ಸೋಲಬಹುದು. ಹಿರಿಯರ ಚಟುವಟಿಕೆಗಳನ್ನು ಕಿರಿಯರು ಕುತೂಹಲಾಂಚಿತರಾಗಿ ನೋಡುತ್ತಾರೆ; ಕಿರಿಯರ ನಿರ್ಮಲ ಮನದ ಪ್ರಾಸಾದಿಕತೆಗಾಗಿ ಹಿರಿಯರು ಹಂಬಲಿಸುತ್ತಾರೆ. ಆ ಕಿರಿಯರ ಕುತೂಹಲ, ಹಿರಿಯರ ಹಂಬಲಗಳು ಸಂಗಮಿಸಿದಲ್ಲಿ ಮಕ್ಕಳ ಸಾಹಿತ್ಯತೀರ್ಥದ ಪ್ರಾದುರ್ಭಾವ ವಾಗುತ್ತದೆ.

ಮಕ್ಕಳ ಸಾಹಿತ್ಯವೇ ಏಕೆ, ಯಾವುದೇ ಸಾಹಿತ್ಯದ ನಿರ್ಮಿತಿಗೂ ಮಗುವಿನ ಮನಸ್ಸು ಅತ್ಯಗತ್ಯ. ಅದಿದ್ದರೆ ಮಾತ್ರ ಸುತ್ತಲಿನ ಸೃಷ್ಟಿ ವ್ಯಾಪಾರಗಳನ್ನು, ಜೀವ ಲೋಕದ ವಿರಾಟ್ ಸ್ವರೂಪವನ್ನು, ಬದುಕಿನ ಅನಂತ ಮುಖಗಳನ್ನು ಬೆರಗುಗಣ್ಣು ಗಳಿಂದ ನೋಡಿ, ಅನುಭವಿಸಿ, ಆನಂದಿಸಿ ಸಾಹಿತ್ಯೀಕರಿಸುವುದು ಸಾಧ್ಯವಾಗುತ್ತದೆ. ಗುರುದೇವ ರವೀಂದ್ರನಾಥ ಠಾಕೂರರು 1939 ರಷ್ಟು ಹಿಂದೆಯೇ, ತಮ್ಮ ಎಪ್ಪತ್ತನೆಯ ವಯಸ್ಸಿನಲ್ಲಿತ್ತ ಹೊಸ ವರ್ಷದ ಸಂದೇಶದಲ್ಲಿ ಹೇಳಿರುವುದನ್ನಿಲ್ಲಿ ಸ್ಮರಿಸಲೇಬೇಕು. "My mind travels back to my boyhood. I have looked at the universe with wonder. That wonder has not vanished even today. If we look at this wonder from the point of view of out daily needs, we shall not find any meaning in it. But we shall be able to solve its mystery it we enter its deeps." "ಬಾಲ್ಯದ ಬೆರಗನ್ನು ಕಳೆದುಕೊಳ್ಳದ್ದರಿಂದಲೇ ಅವರು ಕೊನೆಯುವರೆಗೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ, ಚಿತ್ರ-ಸಂಗೀತ-ನಾಟ್ಯ ಕಲೆಗಳಲ್ಲಿ ಅದ್ಭುತ, ಪ್ರಯೋಗಶೀಲ, ಸ್ವೋಪಜ್ಞ ಸೃಷ್ಟಾರರಾಗಿ ಉಳಿದರು.



ನಾಟಕ ಸಾಮ್ರಾಟ ಶ್ರೀರಂಗರು ಹೇಳಿದಂತೆ. ರವೀಂದ್ರರು ತೆರವು ಮಾಡಿದ ಸ್ಥಾನವನ್ನು ತುಂಬಿದ ರಾಷ್ಟ್ರಕವಿ ಕುವೆಂಪು ಅವರ ಕವಿತೆಯೊಂದನ್ನೂ ಇಲ್ಲಿ ಸ್ಮರಿಸಿ ಕೊಳ್ಳಬೇಕು.

"ಕೆಂಪು ಕೊಕ್ಕಿನಾ ಹಸುರು ಪುಕ್ಕದಾ
ವಿಹಗ ಬಾಣ ಧಂಡು
ಆಕಾಶವೆಲ್ಲ ಗಿಲಗಿಚ್ಚಿಯಹಾಗೆ
ಹೋಯ್ತು ಗಿಣಿಯ ಹಿಂಡು ;
ಐವತ್ತು ವರ್ಷ ಐದಾಗಿ ಹೋಗಿ
ಕಂಡು ಕಂಡು ಕಂಡು,
ಕವಿ ಬೆರಗು ಬಡಿದು ಕುಲಪತಿಯು ಕೆಡೆದು,
ಹಸುಳೆತನದ ಬೆಂಡು
ತೇಲಿ ರಸಧಿಯಾ ಶಿಶು ಸಮಾಧಿಯಲಿ
ಮಗ್ನ, ಮಧುವನುಂಡು ॥ (ಮಂತ್ರಾಕ್ಷತೆ)

ಐವತ್ತರಲ್ಲಿಯೂ ಐದರ ಹಸುಳೆತನದ ಶಿಶುಸಮಾಧಿಯನ್ನು ಪಡೆದು, ಬೆರಗು ಬಡಿದು, ಭುವಿಯ, ಬಾನಿನ, ಬಯಲಿನ, ಬದುಕಿನ ವಿವಿಧ ವಿಲಾಸಗಳನ್ನು ಕಂಡು, ಕಂಡು, ಕಂಡು, ಮಧುವುಂಡು ನಲಿಯಬೇಕೆನ್ನುವವರು ಮಕ್ಕಳ ಸಾಹಿತ್ಯವನ್ನು ಮರೆಯರು.

ಇದರ ಅರಿವು ಇಲ್ಲಿಂದ–ಒಳ್ಳೆಯ ಆಂದೋಲನಗಳ ಉಗಮಸ್ಥಾನವಾದ ಧಾರವಾಡ–ಹುಬ್ಬಳ್ಳಿ ಮಹಾನಗರದಿಂದ–ಕಿರಣಿಸಲಿ; ಕಿರಿಯರ ಸಾಹಿತ್ಯ ಬೆಳೆಸಲು ಹಿರಿಯರು ಹುರುಪಿನಿಂದ ಮುಂದೆ ಬರಲಿ; ಕರ್ನಾಟಕ ಮಕ್ಕಳ ಸಾಹಿತ್ಯ ಅಕಾಡೆಮಿ ಹಣ್ಣು ಬಿಡುವ ಹೆಮ್ಮರವಾಗಿ ಬೆಳೆದು ಕನ್ನಡ ಮಕ್ಕಳ ಶಾರೀರಿಕ–ಮಾನಸಿಕ ಆರೋಗ್ಯ ವರ್ಧನೆಗೆ ಪ್ರೇರಕ ಪೂರಕವಾಗುವ ಸಾಹಿತ್ಯದ ಸವಿ ಫಲಗಳನ್ನು ಕೊಡಲಿ– ಎಂದು ಹಾರೈಸುತ್ತೇನೆ. ಈ ಉನ್ನತ ಪೀಠದಲ್ಲಿ ನನ್ನನ್ನು ಕುಳ್ಳಿರಿಸಿದ ತಮ್ಮ ಅಭಿಮಾನಕ್ಕೆ ಇನ್ನೊಮ್ಮೆ ವಂದಿಸಿ, ನನ್ನ ಈ ಮಾತುಗಳನ್ನು ಶಾಂತಿ ಸ್ಥೈರಣೆಗಳೊಡನೆ ಆಲಿಸಿದ್ದಕ್ಕಾಗಿ ತಮ್ಮೆಲ್ಲರಿಗೆ ತಲೆಬಾಗಿ ವಿರಮಿಸುತ್ತೇನೆ.

ಓಂ ಅರ್ಭಕೇಭ್ಯೋ ನಮಃ